## ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.


**Co-ordinator : Linus Daniel**

**e-mail :**
**info@choose2live.info**
http://www.choose2live.info/
noothana_shristi

**Contact:**
The Christadelphians,
P.O.Box No 535,
Bangalore 560 005,
India.


### ನೂತನ ಸೃಷ್ಟಿ ಪತ್ರಿಕೆಯ ತಂಡ


ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಕಾರ್ಯ ನಿರ್ವಹಣೆ, ಮತ್ತು ಡಿ.ಟಿ.ಪಿ ಸಂಯೋಜಕರು.

ವಿನ್ಸೆಂಟ್ : ಪುನರವಲೋಕನ.


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

***"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]***



# ನನ್ನ ಚಿತ್ತದಂತಲ್ಲ ನಿನ್ನ ಚಿತ್ತದಂತೆಯೇ ಆಗಲಿ

ಯಾರು ಹೀಗೆ ಹೇಳುತ್ತಾರೊ ಅವರು ಬನ್ನಿರಿ, "ಈ ಹೊತ್ತು ಇಲ್ಲವೆ ನಾಳೆ ನಾವು ಇಂಥ ಪಟ್ಟಣಕ್ಕೆ ಹೋಗಿ ಅಲ್ಲಿ ಒಂದು ವರುಷವಿದ್ದು ವ್ಯಾಪಾರವನ್ನು ಮಾಡಿ ಲಾಭವನ್ನು ಸಂಪಾದಿಸುತ್ತೇವೆ ಅನ್ನುವವರೇ ಕೇಳಿರಿ, ನಾಳೆ ಏನಾಗುವುದೋ ನಿಮಗೆ ತಿಳಿ0ಯುದು ನಿಮ್ಮ ಜೀವಮಾನವು ಎಂಥದು ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆ0ಯುಂತಿರುತ್ತೀರಿ" (0ಯಾಕೋಬ 4:13–14).



ರಾಬರ್ಟ್ ಬರ್ನ್ಸ್ ಎಂಬ ಸ್ಕಾಟ್ ದೇಶದ ಕವಿ0ಯು ಒಮ್ಮೆ ಒಂದು ಇಲಿ0ಯು ಕಟ್ಟಿದ್ದ ಬಿಲವನ್ನು ರೈತನೊಬ್ಬನು ನೇಗಿಲಿನಿಂದ ಉಳುತ್ತಿರುವಾಗ ಹಾಳು ಮಾಡಿದ್ದರಿಂದ ದುಃಖಪಟ್ಟು ಒಂದು ಕವಿತೆ0ಯನ್ನು ಬರೆದರು, ಅದನ್ನು ಸ್ಟೇಯಿಸ್ ಬೆಕ್ ಎಂಬುವವರು ಇನ್ನೂ ಹೆಸರುವಾಸಿ0ಯಾಗ ಮಾಡಿದರು. *"ಇಲಿ0ಯ ಹಾಗೂ ಮನುಷ್ಯರ ಸುಂದರವಾದ ಕಲ್ಪನೆಗಳು ಆಗಾಗ್ಗೆ ತಪ್ಪಾಗಬಹುದು, ವಾಗ್ದಾನ ಮಾಡಿದ ಸಂತೋಷವೂ ನಮನ್ನು ಬರಿದಾಗಿಸಿ ದುಃಖ ವೇದನೆಗಳಲ್ಲಿ ಮುಳುಗಿಸಬಹುದು"* ಈ ಮಾತುಗಳು ನಮ್ಮನ್ನು ಹೊಡೆದೆಬ್ಬಿಸುತ್ತವೆ, ನೇಗಿಲು ನಮ್ಮನ್ನಲುಗಾಡಿಸುವ ಒಂದು ಸಾಧಾರಣ ವಸ್ತುವಾಗಿರಬಹುದು. ಆದರೆ ಜೀವನದಲ್ಲಿ ಇನ್ನೂ ಅತ್ಯಧಿಕವಾಗಿ ನಮ್ಮನ್ನು ತೊಂದರೆ ಪಡಿಸಿ ನಮ್ಮ 0ಯೋಜನೆಗಳನ್ನು ಹಾಳುಮಾಡಬಹುದು. ಎಷ್ಟೇ ಗಮನದಿಂದ ಹಣಿದಿದ್ದ ಕಾ0ರ್ಯವಾದಾಗ್ಯೂ ಅದು ನಾಶ ಹೊಂದಬಹುದು, ಆದ್ದರಿಂದ 0ಯಾಕೋಬನು ಬರೆದಿರುವಂತೆ ನಾವು ಹೀಗೆ ಹೇಳಬೇಕು.

"ಆದದರಿಂದ ನೀವು ಅಂತ ಮಾತನ್ನು ಬಿಟ್ಟು ದೇವರ ಚಿತ್ತವಾದರೆ ನಾವು ಬದುಕಿ ಈ ಕೆಲಸವನ್ನಾಗಲೀ ಆ ಕೆಲಸವನ್ನಾಗಲೀ ಮಾಡುವೆವು ಎಂದು ಹೇಳಬೇಕು" (0ಯಾಕೋಬ 4:15).

ಮೊದಲ ಶತಮಾನದಲ್ಲಿ 0ಯಾಕೋಬನು ತನ್ನ ಸುತ್ತಲಿದ್ದವರು ಅನೇಕ ಕಾ0ರ್ಯಗಳ ಕುರಿತು ನಡೆಸಬೇಕಾದ ಕಾ0ರ್ಯಕ್ರಮಗಳ ಬಗ್ಗೆ ಮಾತನಾಡುತ್ತಿದ್ದದ್ದನ್ನು ಗಮನಿಸಿದ್ದನು. ಅವು ನಡೆ0ಯುತ್ತವೋ ಇಲ್ಲವೋ, ಅದಾಗ್ಯೂ ಅವುಗಳ ಬಗ್ಗೆ ಮಾತನಾಡುತ್ತಿದ್ದರು.

## ಗರ್ವ ಪಡಬೇಡಿರಿ :–

ಇಂತಹ ಅರ್ಥ ಹೀನ ಮಾತುಗಳನ್ನು ಗರ್ವವೆಂದು ಜ್ಞಾನೋಕ್ತಿಗಳಲ್ಲಿ ಹೇಳಲಾಗಿದೆ. "ನಾಳೆ ಎಂದು ಕೊಚ್ಚಿಕೊಳ್ಳಬೇಡ ಒಂದು ದಿನದೊಳಗೆ ಏನಾಗುವದೋ ನಿನಗೆ ತಿಳಿ0ಯದು" (ಜ್ಞಾನೋಕ್ತಿಗಳು 27:1).

ನಾವು ಆಸೆಪಟ್ಟ ಎಲ್ಲವೂ ನಮಗೆ ಸಿಕ್ಕಿದವುಗಳ ಮೇಲೆ0ಯೇ ನಾವು ಆತುಕೊಳ್ಳಬೇಡವೆಂದು ಈ ಕಷ್ಟಕರವಾದ ಪಾಠವನ್ನು 21ನೇ ಶತಮಾನದಲ್ಲಿ ಕಲಿತುಕೊಳ್ಳಬೇಕು, ಸ್ಥಿರವಾದ ಜೀವನಗಳು, ಪ್ರೀತಿ0ಯ ಕುಟುಂಬಗಳು, ಸಂತೋಷದ ರಜಾದಿನಗಳು ಇವೆಲ್ಲವುಗಳು ದುಃಖಕರವಾದ ರೀತಿ0ಯಲ್ಲಿ ನಮ್ಮ ಗೆಳೆ0ಯರು, ಸಂಬಂಧಿಕರು ನಮ್ಮ ಸೊತ್ತು ಇವೆಲ್ಲವುಗಳು ಒಂದು ಗಳಿಗೆ0ಯಲ್ಲೇ ನಮ್ಮಿಂದ

ಕಿತ್ತುಕೊಳ್ಳಲ್ಪಡುವವು. ಯಾಕೋಬನು ನಿಜವಾಗಿಯೂ "ನಿನ್ನ ಜೀವಿತವೇನು?" ಎಂಬ ಈ ಪ್ರಶ್ನೆಗೆ –"ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತಿದ್ದೀರಿ" (ಯಾಕೋಬ 4:14) ಎಂದು ವಿವರಣೆ ಕೊಟ್ಟಿದ್ದಾನೆ.

## ನಮ್ಮ ಸ್ವಾರ್ಥಕಲ್ಲ ದೇವರಿಗಾಗಿ :–

ಸಮಯವಿನ್ನೂ ಇರುವಾಗಲೇ ಸ್ವಾರ್ಥಕ್ಕಾಗಿ ಅಲ್ಲ. ನಾವು ದೇವರ ಚಿತ್ತವನ್ನು ನೆರವೇರಿಸಲಿಕ್ಕೂ, ಆತನ ಆಜ್ಞೆಗಳನ್ನು ಕೈಕೊಳ್ಳುವುದಕ್ಕೂ ಪ್ರಾರಂಭಿಸಬೇಕು. ನಮಗೆ ಅಳವಡಿಸುವ ಯೋಜನೆಗಳನ್ನು ಮಾಡುವುದರಲ್ಲೇ ತೃಪ್ತಿಪಟ್ಟುಕೊಳ್ಳದೆ, "ದೇವರ ಚಿತ್ತವಾದರೆ" ಎಂಬ ಮೊಳಿಯನ್ನು ಪ್ರತಿವಾಕ್ಯದ ಕೊನೆಗೂ ತಗಲಿಸಿಕೊಳ್ಳಬೇಕು. ಇದು ಒಂದುರೀತಿಯ ಸಣ್ಣ ವಿಮೆಯ ಕರಾರುಪತ್ರ. ನಾವು ಮಾಡುತ್ತಿರುವ ಈ ಆಲೋಚನೆಗಳು ದೇವರು ನಮ್ಮನ್ನು ನಿಜವಾಗಿ ಮಾಡಬೇಕೆಂದುಕೊಂಡಿದ್ದಾನೋ ಎಂದು ನಮ್ಮನ್ನೇ ಕೇಳಿಕೊಳ್ಳಬೇಕು.

ಅದು ನಾವು ಆತನನ್ನು ಸೇವಿಸಲೂ, ಅಥವಾ ನಮ್ಮ ಆತ್ಮೀಯ ಬೆಳವಣಿಗೆಗೆ ಪ್ರಗತಿ ಕೊಡುತ್ತದೋ ಎಂಬುದಾಗಿ ನೋಡಬೇಕು. ಅಂಥವು ನಮ್ಮ ಜೀವಿತದ ನಿರ್ಣಾಯಕ ಪ್ರಶ್ನೆಗಳು. ನಮ್ಮ ಮನಸ್ಸಿನ ಅತ್ಯುನ್ನತವಾದ ಅಭಿಪ್ರಾಯವು ದೇವರನ್ನು ಮೆಚ್ಚಿಸುವುದೇ ಆಗಿರಬೇಕು. ಒಂದನ್ನು ನಮ್ಮ ಮನದಲ್ಲಿಡಬೇಕು ಅದೇನೆಂದರೆ ಕರ್ತನಾದ ಯೇಸುವಿನ ಬರೋಣವೇ ನಮ್ಮೆಲ್ಲರ ಜೀವಿತದಲ್ಲಿ ಆತನ ಚಿತ್ತವನ್ನು ಅತೀ ಸಮೀಪದಲ್ಲಿ ನಿರ್ಧರಿಸುವಂಥದ್ದಾಗಿರುತ್ತದೆ.

ದೇವರು ನಮ್ಮನ್ನು ಏನು ಮಾಡಬೇಕೆಂದು ಅಪೇಕ್ಷಿಸುತ್ತಾನೆಂಬುದನ್ನು ಹೇಗೆ ತಿಳಿದುಕೊಳ್ಳಬೇಕು, ನಾವೇ ಅದನ್ನು ಪರೀಕ್ಷಿಸಿಕೊಳ್ಳುವುದಾದರೆ ಬರೀ ಕೆಲವು ಮಾತ್ರ ದೇವರ ಚಿತ್ತದಂತೆ ಇದ್ದರೂ, ಬಹಳಷ್ಟು ಆತನು ನಮಗೆ ಕಾಯ್ದಿಟ್ಟವುಗಳಿಗೆ ವಿರೋಧವಾದದ್ದಾಗಿದೆ. ಜೀವಿತವು ಅಸ್ಥಿರವಾದ ಕಾರ್ಯಗಳಿಂದ ಇರುವಂಥದು ಆಗಿದ್ದರೂ, ಯಾವುದನ್ನೂ ಅಂಗೀಕಾರಕ್ಕೆ ತೆಗೆದುಕೊಳ್ಳಲಾಗದು. ಆದ್ದರಿಂದ ಯಾವ ನಿರ್ಧಾರಕ್ಕೆ ಬರುವುದಾದರೂ ಯೋಚನೆಗಳನ್ನು ಮಾಡಿದಾಗ್ಯೂ ಪ್ರಾರ್ಥನೆಯಲ್ಲಿ ತರಬೇಕು, ಹಾಗಿದ್ದರೆ ನಾವು ನಿಜವಾದ ತಾಳ್ಮೆಯಿಂದ ಹೀಗೆ ಹೇಳುವ,

"ನಮ್ಮ ಯಜಮಾನನ ಬರೋಣವು ನಿಧಾನವಾಗುವುದಾದರೆ, ಮತ್ತು ದೇವರಿಗೆ ಮೆಚ್ಚಿಕೆಯಾಗಿರುವುದಾದರೆ ನಾವು ಇಂತಿಂಥದನ್ನು ಮಾಡುತ್ತೇವೆ ಎಂದು ಹೇಳಿರಿ".

ದೇವರ ನ್ಯಾಯತೀರ್ಪು ಒಂದೇಗಳಿಗೆಯಲ್ಲಿ ಉಕ್ಕಿಹರಿದು ಎಲ್ಲರನ್ನೂ ಕೊಚ್ಚಿಕೊಂಡು ಹೋಗುವ ಪ್ರವಾಹದಂತಿರುತ್ತದೆ. ಆ ದಿನದಲ್ಲಿ ಶಾರೀರಿಕವಾಗಿ ಮೆಚ್ಚಿಗೆ ಪಡೆಯಲೂ, ಸ್ವಾರ್ಥವನ್ನು ತೃಪ್ತಿಪಡಿಸಲೂ ಮಾಡುವ ಯಾವುದೂ ಲಾಭ ಪಡೆಯಲಾರದು. ಆದರೆ ನಮ್ಮ ಇಡೀ ಜೀವನವನ್ನು ದೇವರ ಕೈಗಳಲ್ಲಿ ಒಪ್ಪಿಸುವುದಾದರೆ, ನಮ್ಮನ್ನು ಗಮನಿಸಿ ನಡೆಸಲು ಆತನನ್ನು ನಂಬಿದರೆ, ಆತನು ನಮಗಾಗಿ ಚಿಂತಿಸುತ್ತಾನೆಂಬುದನ್ನು ಖಂಡಿತವಾಗಿ ನಂಬಬಹುದು. ಹಾಗೆಯೇ ಯೇಸುವೂ ಬಾಳಿದನು. ಆತನು ತನ್ನ ಇಡೀ ಭರವಸೆಯನ್ನು, ನಂಬಿಕೆಯನ್ನೂ ಆತನ ತಂದೆಯ ಮೇಲೆ ಹಾಕಿ, ಪರಿಪೂರ್ಣ ವಿಧೇಯತೆಯನ್ನು ಆತನಿಗೆ ತೋರಿಸಿದನು. ಆತನು ತನ್ನ ಮರಣದ ಪರ್ಯಂತರ ವಿಧೇಯನಾದನು. ಶಿಲುಬೆಯ ಕಠಿಣ ಪರೀಕ್ಷೆಗೆ ತನ್ನನ್ನು ಒಪ್ಪಿಸಿಕೊಡುವಾಗ ಆತನು ಮಾಡಿದ ಪ್ರಾರ್ಥನೆಯು ನಮ್ಮ ಪ್ರಾರ್ಥನೆಯಾಗಿರಬೇಕು. ಕಠಿಣವಾದಾಗ್ಯೂ, ನಮ್ಮಲ್ಲಿ ಏನನ್ನೂ ಹಿಡಿದಿಟ್ಟುಕೊಳ್ಳದೆ ನಮ್ಮನ್ನು ಆತನಿಗೆ ಒಪ್ಪಿಸಿಕೊಡಬೇಕು, ಈವತ್ತಿಗೂ, ಯಾವಾಗಲೂ ಮಾಡಬೇಕಾದ ಪ್ರಾರ್ಥನೆ "ನನ್ನ ಚಿತ್ತವಲ್ಲ, ನಿನ್ನ ಚಿತ್ತದಂತೆಯೇ ಆಗಲಿ" (ಲೂಕ 22:42).



# –: ದೇವರ ಕಡೆಗೆ ತಿರುಗಿಕೊಳ್ಳುವುದು :–

ಯೆರೂಸಲೇಮಿನ ಬೀದಿಗಳಲ್ಲಿ ಪೇತ್ರನೆಂಬ ಮೀನುಗಾರನು ಜನರಿಗೆ ಬೋಧನೆ ನೀಡುತ್ತಿದ್ದನು. ಗಲಿಲಾಯ ಸಮುದ್ರದಲ್ಲಿ ಆಗತಾನೇ ಹಿಡಿದಿದ್ದ ಮೀನುಗಳನ್ನು ಅವನು ನೀಡುತ್ತಿರಲಿಲ್ಲ. ಅವನು ಸಮೀಪದಲ್ಲಿ ನಡೆದಿದ್ದ ಘಟನೆಯ ಬಗ್ಗೆ, ಪಟ್ಟಣದ ಹೊರಗೆ ಒಬ್ಬ ಖೈದಿಯಂತೆ ಕೊಲ್ಲಲ್ಪಟ್ಟ ಯೇಸುವಿನ ಬಗ್ಗೆ ಮಾತನಾಡುತ್ತಿದ್ದನು. ಆರುವಾರಗಳ ಮುಂಚೆ, ತಪ್ಪಾದ ಆಪಾದನೆಯಿಂದ, ಶಿಕ್ಷೆಗೊಳಪಟ್ಟು ಶಿಲುಬೆಯಲ್ಲಿ ಕ್ರೂರವಾಗಿ ಯೇಸುವು ಜಡಿಯಲ್ಪಟ್ಟದ್ದಕ್ಕೆ ಅಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದವರು ಕಾರಣವೆಂದು ಆಪಾದಿಸುತ್ತಿದ್ದನು.

"ಆ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್ ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ" (ಅಪೋಸ್ತಲರ ಕೃತ್ಯಗಳು 2:23).

# ಎರಡು ದೊಡ್ಡ ಸತ್ಯಗಳು



ನೀವು ಆ ಆಪಾದನೆಗಳನ್ನು ಧ್ಯಾನಮಾಡುವುದಾದರೆ, ಎರಡು ಕಾರ್ಯಗಳನ್ನು ಗಮನಿಸಿರುವಿರಿ. ಮೊದಲನೆಯದು ಅವರು ನಡೆಸಿದ ಕಾರ್ಯಗಳಿಗೆ ಸ್ವಲ್ಪಮಟ್ಟಿಗೆ ಜವಾಬ್ದಾರಿಗಳಾಗಿದ್ದರು; ಆ ಗುಂಪು ಆತನ ಮರಣಕ್ಕಾಗಿ ಗಲಾಟೆ ಮಾಡಿ ಕಿರುಚಿ, ಆತನಿಗೆ ಬದಲು ಕೊಲೆಗಾರನ ಬಿಡುಗಡೆಗಾಗಿ ಕಿರುಚಿತು. ಗಮನಿಸಬೇಕಾದ ಹಾಗೂ ಆಶ್ಚರ್ಯಪಡಬೇಕಾದ ಅಂಶವೆಂದರೆ, ನಡೆದದ್ದೆಲ್ಲವೂ ರಕ್ಷಣಾರ್ಥವಾಗಿಯೇ ದೇವರ ಉದ್ದೇಶದಲ್ಲಿ ಜರುಗಿದ್ದು,ಅದು ಆತನ ಉದ್ದೇಶವೇ ಎಂದು ಅಪೋಸ್ತಲನು ವಿವರಿಸಿದನು. ಅದು ಆಕಸ್ಮಿಕ ಅಲ್ಲ, ಯೇಸುಕ್ರಿಸ್ತನ ಶಿಲುಬೆಯ ಮರಣವು ದೇವರ ರಕ್ಷಣಾಯೋಜನೆ. ಅಂದರೆ ಆತನ ಮಗನು ಜನರನ್ನು ಪಾಪದಿಂದ ಬಿಡಿಸಲೋಸುಗ ತನ್ನನ್ನು ಬಲಿಯಾಗಿ ಅರ್ಪಿಸಿಕೊಂಡು ತನ್ನ ಜೀವನವನ್ನೇ

ಕೊಡಬೇಕಾದುದು ದೇವರ ಉದ್ದೇಶ. ಅದು ಇಸ್ರಾಯೇಲ್ಯರ ಹೊಣೆಗಾರಿಕೆಯನ್ನು ಕಡಿಮೆ ಮಾಡುವುದಕ್ಕಲ್ಲ–ಅವರಿಗೆ ಪಾಪಕ್ಷಮೆಯ ನಂಬಿಕೆಯನ್ನು ನೀಡಿದ್ದೇ ಆಗಿರುತ್ತದೆ. ಪೇತ್ರನು ನೀಡಿದ ವಿವರಣೆಯಿಂದ ಅದು ಸ್ಪಷ್ಟವಾಯಿತು. ಅವನು ಅರಸನಾದ ದಾವೀದನ ಬಗ್ಗೆಯೂ ಆತನ ಬರಹದ ಬಗ್ಗೆಯೂ ಆ ಗುಂಪಿಗೆ ತಿಳಿಸಿದ್ದಾನೆ. ಅವನು ಅರಸನಾದ ದಾವಿದನ ಬಗ್ಗೆ ತಿಳಿಸಿಕೊಡುತ್ತಾ, ಸತ್ತು, ಜೀವಿತನಾಗಿ ಎಬ್ಬಿಸಲ್ಪಡುವ ರಕ್ಷಕನಿಗಾಗಿಯೂ, ವಿಮೋಚಕನಿಗಾಗಿಯೂ ಅರಸನು ಕಾದುಕೊಂಡಿದ್ದನು ಎಂದು ತಿಳಿಸಿದ್ದಾನೆ. ದಾವೀದನು ತನ್ನ ಸಂತಾನದಲ್ಲಿ ಮಹಿಮೆ ಹಾಗೂ ಘನವನ್ನು ಹೊಂದಲಿರುವ ವ್ಯಕ್ತಿಯ ಬಗ್ಗೆ ತನ್ನ ಕೀರ್ತನೆಗಳಲ್ಲಿ ಪ್ರವಾದನೆ ತಿಳಿಸಿದ್ದಾನೆ. ಈ ಪ್ರವಾದನೆಯು ಯೇಸುವಿನ ಮೂಲಕ ನೆರವೇರಿತು. ಇದನ್ನು,

"ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ;.... ಆದ್ದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನು ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು" (ಅಪೋಸ್ತಲರ ಕೃತ್ಯಗಳು 2:32, 36).

# ನಾವು ಏನು ಮಾಡಬೇಕು :–

ಯೇಸುವಿನ ನಿಜ ವ್ಯಕ್ತಿತ್ವದ ಬಗ್ಗೆ ತಪ್ಪಾಗಿ ಅರ್ಥಮಾಡಿಕೊಂಡ ಹಾಗೂ ಆತನ ಮೂಲದ ಬಗ್ಗೆ ಸರಿಯಾಗಿ ತಿಳಿಕೊಳ್ಳದಿದ್ದ, ವಂಚಿಸಲ್ಪಟ್ಟ, ಭ್ರಾಂತಿಗೊಳಗಾಗಿದ್ದ ಯೆರೂಸಲೇಮಿನ ನಿವಾಸಿಗಳ ಮೇಲೆ ಎಂತಹ ಆಪಾದನೆ! ಅವರು ಆತನನ್ನು ವಂಚಕನೆಂದೂ, ಸುಳ್ಳು ತತ್ವಗಳನ್ನು ಬೋಧಿಸುವವನೆಂದೂ, ಹಳೇಧರ್ಮಗುರುಗಳಿಗೆ ವಿರುದ್ಧವಾಗಿ ಎದ್ದುನಿಂತ ಹೊಸಬ ಎಂದು ತಿಳಿದಿದ್ದರು. ಆದರೆ ಪೇತ್ರನು–ಅವರನ್ನು ದೇವರಕುಮಾರನನ್ನು ಕೊಲೆಮಾಡಿದವರೆಂದು ಆಪಾದಿಸಿದನು. ಲೋಕರಕ್ಷಕನು ಶಿಲುಬೆಗೇರಿಸಲ್ಪಟ್ಟನೆಂದು ಹಿಯಾಳಿಸಿದ್ದರು. ಆದ್ದರಿಂದಲೇ ಈಗ ಅವರ ಹೃದಯದಲ್ಲಿ ಅಲಗು ನೆಟ್ಟಂತಾಗಿ "ಸಹೋದರರೇ ನಾವೇನು ಮಾಡಬೇಕು?" ಎಂದು ಕೇಳಿದರು (ಅಪೋಸ್ತಲರ ಕೃತ್ಯಗಳು 2:37).

ಮಾನವ ದೃಷ್ಟಿಯಲ್ಲಿ ಈ ಪರಿಸ್ಥಿತಿಯು ಅಸಹಾಯಕತೆಯೇ. ಒಂದು ವೇಳೆ ಒಬ್ಬ ಕ್ರೂರ ರಾಜನು ತನ್ನ ಮಗನನ್ನು ಮಾರುವೇಷದಲ್ಲಿ, ತನ್ನ ಪ್ರಜೆಗಳು ತನ್ನಬಗ್ಗೆ ನಿಜವಾಗಿ ಏನು ನೆನಸಿದ್ದಾರೋ ತಿಳಿಕೊಂಡು ಬರಲು ಕಳುಹಿಸಿ, ಆ ಮಗನನ್ನು ಅವರು ಉದ್ದೇಶಪೂರ್ವಕವಾಗಿಯೇ ಕೊಂದಿದ್ದರೆ? ಏನಾಗಿರುತ್ತಿತ್ತೆಂದು ಊಹಿಸಿನೋಡಿ. ಆ ರಾಜನು ಪ್ರತಿಕಾರಕ್ಕಾಗಿ ಅವರನ್ನು ಧ್ವಂಸ ಮಾಡುವುದೇ ಆಗಿರುತ್ತಿತ್ತು, ಆ ಹೊಣೆಗಾರರಿಗೆ ಯಾವ ಕರುಣೆಯನ್ನೂ ಎದಿರುನೋಡಲು ಆಗುತ್ತಿರಲಿಲ್ಲ. ಹಾಗೆಯೇ ಬೇಕೆಂತಲೇ ಉದ್ದೇಶಪೂರ್ವಕವಾಗಿ ದೇವರಿಗೂ, ಆತನ ಮಗನಿಗೂ ವಿರುದ್ಧವಾಗಿ ನಡೆಸಿದ ಈ ಪಾತಕಕ್ಕೆ ಯೆಹೂದ ದೇಶವು ಖಂಡಿತವಾಗಿ ಶಿಕ್ಷೆಯನ್ನು ಎದಿರುನೋಡಬೇಕಾಗಿತ್ತು. ನಿಜವಾಗಿಯೂ ಇಂತಹ ಘೋರಕಾರ್ಯಕ್ಕೆ ಯಾವ ಕ್ಷಮಾಪಣೆಯೂ ಇರುತ್ತಿರಲಿಲ್ಲ–



ಮಾನವ ಕುಲವು ನಡೆಸಿದ ಇಂತಹ ಮಹಾಪಾತಕಕ್ಕೆ(ಅಪರಾಧಕ್ಕೆ) ಕ್ಷಮೆ ಎಂಬುದು ಇರುತ್ತಿರಲಿಲ್ಲ, ಆದರೆ "ನಾವೇನು ಮಾಡಬೇಕು?" ಎಂದು ಕೇಳಿದ ಪ್ರಶ್ನೆಗೆ ದೇವರು ಪೇತ್ರನ ಮೂಲಕ ಕೊಡಿಸಿರುವ ಉತ್ತರ "ದೇವರ ಅದ್ಭುತವಾದ ಕ್ಷಮಾಪಣೆ!"

"ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೆ ಅಂತು ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು" (ಅಪೋಸ್ತಲರ ಕೃತ್ಯಗಳು 2:38–40). ಇಂದು ನಮ್ಮೆಲ್ಲರಿಗೂ ಒದಗಿದೆ.

# ಪಶ್ಚಾತ್ತಾಪ ಹೊಂದಿ ರಕ್ಷಣೆಹೊಂದಿರಿ :–

ನಾವು ಈಗಾಗಲೇ ಪಶ್ಚಾತ್ತಾಪದ ಅರ್ಥವನ್ನು ತಿಳಿದಿದ್ದೇವೆ– ಅಂದರೆ ನಾವು ಮಾಡಿದ ಪಾಪಗಳಿಗೆ ಆಳವಾಗಿ ಮನಮರುಗಿ, ನಮ್ಮ ಪಾಪಗಳನ್ನು ದೇವರ ಮುಂದೆ ಅರಿಕೆಮಾಡಿ ಆತನಿಂದ ಕ್ಷಮಾಪಣೆ ಬೇಡುವುದಾಗಿದೆ. ಅರಸನಾದ ದಾವೀದನು ಭಯಂಕರ ಪಾಪ ಮಾಡಿದಾಗ, ದೇವರ ಕೃಪೆಗಾಗಿ ಪಶ್ಚಾತ್ತಾಪಪಟ್ಟು ಬೇಡಿಕೊಂಡನು. ದೇವರು ಅವನನ್ನು ಕೃಪೆಯಿಂದಲೂ, ಕರುಣೆಯಿಂದಲೂ ಮನ್ನಿಸಿದನು. ಅದರ ಪರಿಣಾಮ ಅವನು ಸಂತೋಷ ಹಾಗೂ ಕೃತಜ್ಞತೆಯುಳ್ಳವನಾದನು. ಹೀಗೆ ಇಂತಹ ಸನ್ನಿವೇಶಗಳು ಯಾರಿಗೆತಾನೇ ಸಂತೋಷ ತರಲಾರದು? ಯೇಸುವಿನ ಮರಣಕ್ಕೆ ಕಾರಣವಾದ ಅವರು ಮನಮರುಗಿ ದೀಕ್ಷಾಸ್ನಾನ ಹೊಂದಿಕೊಳ್ಳಬೇಕೆಂದು ಪೇತ್ರನು ಹೇಳುತ್ತಿದ್ದಾನೆ. ಹೀಗೆ ಅವರೆಲ್ಲರೂ ದೇವರಕ್ಕೆ ಪಾತ್ರರಾಗುತ್ತಾರೆ, ಹೀಗೆ ಪರಿಶುದ್ಧಾತ್ಮವರ ಎಂಬುದಾಗಿ ವಿವರಿಸುತ್ತಾನೆ, ಅದರ ಅರ್ಥ "ರಕ್ಷಣೆಹೊಂದಬೇಕು" ಎಂಬುದೇ.

ಹೀಗೆ ಬಹಳ ಹಿಂದೆ ಪೇತ್ರನು ಆಕಾಂಕ್ಷೆಯಿಂದಿದ್ದ ಹೆಂಗಸರಿಗೂ, ಗಂಡಸರಿಗೂ ಈ ಆಶ್ಚರ್ಯಕರವಾದ ಅದ್ಭುತ ಸತ್ಯವನ್ನು ಸಾರಿದನು. ಯಾರಿಗೆಲ್ಲಾ ರಕ್ಷಣೆಹೊಂದಲು ಆಶೆಯಿದೆಯೋ ಅವರೆಲ್ಲರನ್ನು ಅವರ ಪಾಪಗಳಿಂದ ದೇವರು ರಕ್ಷಿಸಬೇಕೆಂದು ಹಾರೈಸುತ್ತಾನೆ. ಅನೇಕ ವರ್ಷಗಳ ನಂತರ ಅಪೋಸ್ತಲನು ಇದನ್ನೇ ತನ್ನ ಪತ್ರದಲ್ಲಿ ಬರೆದಿರುತ್ತಾನೆ.

"ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವುದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘ ಶಾಂತಿಯುಳ್ಳವನಾಗಿದ್ದಾನೆ" (2ಪೇತ್ರ 3:9).

# ಪಾಪಿಗಳ ರಕ್ಷಣೆಗಾಗಿ :–

ಹೊಸ ಒಡಂಬಡಿಕೆಯಲ್ಲಿ ಇದೇ ಸತ್ಯವನ್ನು ಹಲವಾರು ಸಲ ಹೇಳಿಯದೆ. ಅದು ಯಾವಾಗಲೂ ಆಶ್ಚರ್ಯವೂ, ಮೆಚ್ಚಿಕೊಳ್ಳುವಂಥದ್ದಾಗಿಯೂ, ಜನರನ್ನು ಬಿಡುಗಡೆ ಮಾಡಿ ರಕ್ಷಿಸುವಂಥದ್ದಾಗಿಯೂ ಇರುತ್ತದೆ. ಅಪೋಸ್ತಲನಾದ ಪೌಲನನ್ನು ನೋಡಿ, ದಮಸ್ಕದ ವಿಶ್ವಾಸಿಗಳನ್ನು ಕೊಲೆಗೀಡುಮಾಡುವ ಉದ್ದೇಶದಿಂದ ತೆರಳಿದ್ದನು. ಆದರೆ ಮೂವತ್ತು ವರ್ಷಗಳ ನಂತರ ಅವನು ದೇವರ ಈ ಅದ್ಭುತ ಕ್ಷಮಾಪಣೆಯ ಕುರಿತು ಆಶ್ಚರ್ಯ ಪಡುತ್ತಲಿದ್ದಾನೆ.

''ಈ ಸುವಾರ್ತೆಯ ಸೇವೆಯು ನನಗೆ ಕೊಡಲ್ಪಟ್ಟಿತು, ನನಗೆ ಬಲವನ್ನು ದಯಪಾಲಿಸಿದವನು ನಮ್ಮ ಕರ್ತನಾದ ಯೇಸುಕ್ರಿಸ್ತನೇ. ಮೊದಲು ದೂಷಕನೂ ಹಿಂಸಕನೂ ಬಲತ್ಕಾರಿಯೂ ಆಗಿದ್ದ ನನ್ನನ್ನು ಆತನು ನಂಬಿಕಸ್ತನೆಂದು ಎಣಿಸಿ ತನ್ನ ಸೇವೆಗೆ ನೇಮಿಸಿಕೊಂಡದ್ದಾಕ್ಕಾಗಿ ನಾನು ಆತನಿಗೆ ಸ್ತೋತ್ರಸಲ್ಲಿಸುತ್ತೇನೆ. ನಾವು ಅವಿಶ್ವಾಸಿಯಾಗಿ ತಿಳಿಯದೆ ಹಾಗೆ ಮಾಡಿದ್ದರಿಂದ ನನ್ನ ಮೇಲೆ ಕರುಣೆ ಉಂಟಾಯಿತು; ನಮ್ಮ ಕರ್ತನ ಕೃಪೆಯು ಅತ್ಯಧಿಕವಾಗಿದ್ದು, ಕ್ರಿಸ್ತಯೇಸುವಿನಲ್ಲಿಯ ನಂಬಿಕೆಯನ್ನು ಪ್ರೀತಿಯನ್ನೂ ನನ್ನಲ್ಲಿ ಉಂಟುಮಾಡಿತು. ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬತಕ್ಕದ್ದಾಗಿಯೂ ಸರ್ವಾಂಗೀಕಾರಕ್ಕೂ ಯೋಗ್ಯವಾದದ್ದಾಗಿಯೂ ಅದೆ; ಆ ಪಾಪಿಗಳಲ್ಲಿ ನಾನೇ ಮುಖ್ಯನು'' (1ತಿಮೋಥೆ 1:12–15).

ದಾವೀದನಂತೆ, ಪೌಲನು ತಾನು ದೇವರ ಕಟ್ಟಳೆಗಳನ್ನು ಮುರಿದು ತಾನೇ ಪಾಪಿಗಳಲ್ಲಿ ಮುಖ್ಯಪಾಪಿಯಾಗಿರುವುದನ್ನು ಗ್ರಹಿಸಿಕೊಂಡನು. ಆದ್ದರಿಂದಲೇ ದೇವರು ಆತನನ್ನು ಕ್ಷಮಿಸಿ ರಕ್ಷಣೆಯ ಸುವಾರ್ತೆಯನ್ನು ಅವನಿಗೇ ಒಪ್ಪಿಸಿ ಅದನ್ನು ಇನ್ನೂ ವಿಶೇಷಪಡಿಸಿದನು. ಅದು ದೇವರ ಮಹಾ ಒಳ್ಳೆಯತನದ ಬಗ್ಗೆಯೂ, ಕೃಪೆಯ ಬಗ್ಗೆಯೂ ಇನ್ನೂ ಎಚ್ಚರ ಹೊಂದುವಂತೆ ಮಾಡಿತು. ಈ ಹೊಸ ನಂಬಿಕೆಗೆ ತನ್ನ ಜೀವಮಾನವನ್ನೇ ಮುಡುಪಾಗಿಸಿ ದೇವರ ಕೃಪೆಗೆ ಪೌಲನು ತನ್ನನ್ನು ಒಪ್ಪಿಸಿಕೊಟ್ಟನು. ಅವನು ರಕ್ಷಿಸಲ್ಪಟ್ಟ ಪಾಪಿಯಾದ್ದರಿಂದ, ತನ್ನ ಜೀವಿತದಲ್ಲಿ ಮಾಡಲ್ಪಟ್ಟ ಆಶೀರ್ವಾದಕ್ಕೆ ತಕ್ಕಂತೆ ಇಡೀ ಜೀವನದಲ್ಲಿ ಅದನ್ನು ತೋರಿಸಿದನು.

''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ; ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು'' (ಗಲಾತ್ಯ 2:20).

# ಪರಿವರ್ತನೆ :–

ಮಾನಸಾಂತರ ಹೊಂದಿ ದೀಕ್ಷಾಸ್ನಾನ ಪಡೆದುಕೊಳ್ಳುವುದು ಅದ್ಭುತವಾದ ಆಹ್ವಾನವಾದಾಗ್ಯೂ ದೊಡ್ಡ ಸವಾಲಾಗಿರುತ್ತದೆ. ಒಂದು ರೀತಿಯಲ್ಲಿ ಯೆರೂಸಲೇಮಿನ ನಿವಾಸಿಗಳಿಗೆ ಪೂರ್ಣವಾದ ಉಚಿತ ಕ್ಷಮಾಪಣೆಯನ್ನು ಕೊಟ್ಟಿತು. ಅವರು ಯಾವುದಕ್ಕೂ ಇನ್ನುಮೇಲೆ ಹೊಣೆಗಾರರಲ್ಲ, ದೇವರು ಕ್ಷಮಾಪಣೆಯನ್ನು ನೀಡಿ ಅವರ ಕೆಟ್ಟತನವನ್ನು ಮರೆತುಬಿಡುವನು. ಆತನ ಕ್ಷಮಾಪಣೆ ಹೀಗಿರುವುದು:



**''ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟುದೂರ ಮಾಡಿದ್ದಾನೆ'' (ಕೀರ್ತನೆಗಳು 103:12).**

ಎಂದು ದಾವೀದನು ತನ್ನ ಕೀರ್ತನೆಗಳಲ್ಲಿ ತಿಳಿಸಿಕೊಟ್ಟಿದ್ದಾನೆ. ಅಂದರೆ ದೇವರ ಕ್ಷಮಾಪಣೆಗೆ ಕೊನೆಯಿಲ್ಲ, ಯಾವ ರೀತಿಯಲ್ಲೂ ಅಳಿವಿಲ್ಲದ, ಅಡ್ಡಿಯಿಲ್ಲದ ಪ್ರೀತಿಯು ಇದಾಗಿದೆ. ಬೇರೊಂದು ರೀತಿಯಲ್ಲಿ ಅದು ಸಾಧಾರಣ ಗಂಡಸರಿಗೂ, ಹೆಂಗಸರಿಗೂ ಭಯಹುಟ್ಟಿಸುವಂತಹ, ಹೊಸತೆರನಾದ ಜೀವಿತ ಯಾಕೆಂದರೆ ಅದು ದೇವರಿಗೆ ಕೃತಜ್ಞರಾಗಿ, ಆತನನ್ನು ಮೆಚ್ಚಿಸುವ ರೀತಿಯಲ್ಲಿ ಜೀವಿಸಬೇಕಾದದ್ದಾಗಿದೆ.

ಇದನ್ನೇ ಅಪೋಸ್ತಲನಾದ ಪೇತ್ರನು ಕೆಲವು ದಿನಗಳ ನಂತರ ಯೆರೂಸಲೇಮಿನ ದೇವಾಲಯದಲ್ಲಿ ಆತನ ಮಾತುಗಳನ್ನು ಆಸಕ್ತಿಯಿಂದ ಕೇಳಲು ಬಂದಿದ್ದ ಜನರಿಗೆ ಹೇಳಿದನು. ಒಬ್ಬ ಕುಂಟನು ಆಗತಾನೇ ಗುಣಹೊಂದಿದ್ದನು. ಇನ್ನೊಂದು ವ್ಯತ್ಯಾಸವಾದ ಗುಂಪು ತನ್ನ ಸುತ್ತಲೂ ಇದ್ದದ್ದನ್ನು ನೋಡಿದ ಪೇತ್ರನು ಅವರಿಗೂ ದೇವರ ಕೃಪಾದಾನವಾದ ರಕ್ಷಣೆಯ ಬಗ್ಗೆ ತಿಳಿಸಿದನು.

ಅವನು– ದೇವಕುಮಾರನಾದ ಯೇಸುವನ್ನು ಅರಿತುಕೊಳ್ಳುವುದರ ಬದಲು ಕ್ರೂರವಾಗಿ ಅವರು ನಡೆಸಿದರೆಂದೂ, ಹಾಗೆ ಮಾಡಿದ್ದರ ಕಾರಣ ಅವರು ಸತ್ಯವನ್ನು ತಿಳಿಯದೆ ಮಾಡಿದ್ದೆಂದೂ, ರಕ್ಷಕನೂ ವಿಮೋಚಕನೂ ಬರಬೇಕಿದ್ದದ್ದನ್ನು ಮೊದಲೇ ದೇವರು ತಿಳಿಯಪಡಿಸಿದ್ದು, ಈಗ ಆತನ ಕೃಪೆಯ ಚಿತ್ತವನ್ನು ನೆರವೇರಿಸಲಿಕ್ಕೆ ಒಂದು ಮಾರ್ಗವಾಯಿತು ಎಂದು ಹೇಳಿ ಈ ಬೇಡಿಕೆಯನ್ನು ಅವರ ಮುಂದಿಟ್ಟನು;

**''ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರಿಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು'' (ಅಪೋಸ್ತಲರ ಕೃತ್ಯಗಳು 3:19–20).**

ದೇವರು ಏನು ಮಾಡಬೇಕಿಂದಿದ್ದಾನೆಂಬುದರ ಅರಿವು ಸ್ವಲ್ಪಸ್ವಲ್ಪವಾಗಿ ತಿಳಿಯುತ್ತಿದೆ. ದೇವರ ರಕ್ಷಣೆಯೆಂಬ ವರವನ್ನು ಪಡಕೊಳ್ಳಬೇಕಾದರೆ ನಾವು:–

* **ನಮ್ಮ ಪಾಪಗಳಿಗೆ ಪಶ್ಚಾತ್ತಾಪಪಡಬೇಕು,**
* **ದೀಕ್ಷಾಸ್ನಾನ ಪಡೆದುಕೊಳ್ಳಬೇಕು,**
* **ಮಾನಸಾಂತರ(ಪರಿವರ್ತನೆ) ಹೊಂದಿ ದೇವರ ಚಿತ್ತದಂತೆ ನಡೆಯಬೇಕು.**

ನಾವು ದೇವರಲ್ಲಿ ಹೊಸಜೀವ ಪಡೆಯಬೇಕಾದರೆ ನಾವು ಏನು ಮಾಡಬೇಕೆಂಬುದನ್ನು ತಿಳಿದು ಅದನ್ನು ಈಗಲೇ ಪ್ರಾರಂಭ ಮಾಡುವುದು ಒಳ್ಳೆಯದು.

–0–0–0–

# ಇಸ್ರಾಯೇಲು ಯಾಕೆ ಕೀಲಿ ಕೈಯಾಗಿದೆ?

*ಭೂಲೋಕದ ಸಮಾಧಾನಕ್ಕೆ ಇಸ್ರಾ0ಯೇಲ್ ದೇಶವು 0ಯಾಕೆ ಕೀಲಿ ಕೈ0ಯಾಗಿದೆ? ಭೂಮಿ0ಯ ಇತರ ಕುಲಗಳಿಗಿಂತ 0ಯೆಹೂದ ಕುಲವು ಚರಿತ್ರೆ0ಯಲ್ಲಿ ಬೇರೆ0ಯಾದದ್ದಾಗಿದೆ. ದೇವರ ಮಕ್ಕಳೆನಿಸಿಕೊಂಡಿರುವ ಇವರು ಇತರ ಜನಾಂಗಗಳಿಗಿಂತ ಅತ್ಯಂತ ಶ್ರಮೆ0ಯನ್ನೂ, ಕಷ್ಟವನ್ನೂ ಅನುಭವಿಸಿದ್ದಾರೆ. ದೇವರು ತನ್ನ ಉದ್ದೇಶದಂತೆ ನಡೆ0ಯದ ಈ ಜನಾಂಗವನ್ನು ಆತನು ಏಕೆ ಉಳಿಸಿರಬೇಕು?*

## ಅಪೂರ್ವ ಇತಿಹಾಸ :–

ಇಸ್ರಾ0ಯೇಲ್ಯರು ಐಗುಪ್ತದಲ್ಲಿ ದಾಸರಾಗಿದ್ದಾಗಲೇ ಒಂದು ಜನಾಂಗವಾಗಿ, ಒಬ್ಬ ಐಗುಪ್ತನಿಂದ ಸಾಕಲ್ಪಟ್ಟ ಇಬ್ರಿ0ಯನಾದ ಮೋಶೆ ಎಂಬುವನ ಮೂಲಕ ಐಗುಪ್ತರ ಗುಲಾಮಗಿರಿಯಿಂದ ಬಿಡುಗಡೆ ಮಾಡಲ್ಪಟ್ಟರು. ಸಿನಾಯಿ ಪ0ರ್ಯಾ0ಯ ದ್ವೀಪದಲ್ಲಿ ಭ0ಯಂಕರ ಕಷ್ಟದಿಂದಿದ್ದ ಕಾಲದಲ್ಲಿ 0ಯೋರ್ದನ್ ನದಿ0ಯ ಎರಡೂ ಕಡೆಗಳನ್ನು ಜಯಿಸಿ, ಒಂದು ಜನಾಂಗವಾಗಿ ಎಣಿಸಲ್ಪಟ್ಟು ಸೀನಾಯಿ ಬೆಟ್ಟದಲ್ಲಿ ಪಡಕೊಂಡ ದೇವರ ಕಟ್ಟಳೆಗಳ ಪ್ರಕಾರ ನಡೆಸಲ್ಪಟ್ಟರು. ಅವರಿಗೆ 0ಯಾಜಕರಿಂದಲೂ, ಪರಿಶುದ್ಧ ಮಂಜೂಷದ ಮೂಲಕವು ವಿಶೇಷ ಆರಾಧನೆ ಹೊಂದಿದ್ದು, ಕಾಲವು ಬಂದಾಗ ಅವರು ಒಂದು ರಾಜ್ಯವಾದರು.



ದೇವರು ಅವರಿಗೆ ರಾಜರನ್ನು ಆರಿಸಿ ಅವರನ್ನೂ, ದೇಶವನ್ನು ನಡೆಸಲು, ಆತನ ದೃಷ್ಟಿ0ಯಲ್ಲಿ ಅವರವರ ನಡತೆಗೆ ತಕ್ಕಂತೆ ಒಳ್ಳೆ0ಯ ಹಾಗೂ ಕೇಡಾದ ಅನುಭವದೊಳಗೆ ಅವರನ್ನು ನಡೆಸಿದನು. ಕೆಡುಕಾದ ಸಂದರ್ಭಗಳಲ್ಲಿ ಶತ್ರುಗಳು ಅವರ ಮೇಲೆ ಆಧಿಪತ್ಯ ನಡೆಸಿ ಅವರನ್ನು ಸೆರೆ0ಯೊ0ಯ್ದರು. ಮೊದಲು ಉತ್ತರದಲ್ಲಿದ್ದ ಜನಾಂಗವನ್ನು ಅಶೂ0ರ್ಯದವರೂ, ನಂತರ



ದಕ್ಷಿಣದ ಜನಾಂಗವನ್ನು ಬ್ಯಾಬಿಲೋನಿಗೂ(ಈಗಿನ ಇರಾಕ್) ಸೆರೆ0ಯಾಗಿ ತೆಗೆದುಕೊಂಡು ಹೋದರು.

ಅಲ್ಲಿ ರಾಜ್ಯವು ಅಂತ್ಯಗೊಂಡು ತಿರುಗಿ ಕಟ್ಟಲ್ಪಡಲೇ ಇಲ್ಲ. ಆ ಜನಾಂಗವು ಇರಲು ಕಾರಣವಾದ ಸತ್ಯವೇದ ಸಮು0ಯದ 0ಯೆಹೂದ್ಯರು ಇದಕ್ಕೆ ಕಾರಣಕರ್ತೃಗಳಾಗಿ ಪರ್ಶಿ0ಯಾದವರಿಂದಲೂ, ಗ್ರೀಕರಿಂದಲೂ, ನಂತರ ರೋಮನ್ನರಿಂದಲೂ ಆಳಲ್ಪಟ್ಟರು. ಆ ರೋಮನ್ನರ ಆಳ್ವಿಕೆ0ಯ ಸಮ0ಯದಲ್ಲೇ, ದೇವರ ಏಕೈಕ ಕುಮಾರನಾದ 0ಯೇಸುವು ಜನಿಸಿದನು.

## ದೇವರು ಅನುಗ್ರಹಿಸಿದ ಮೆಸ್ಸೀಯನು :–

ತಮ್ಮ ವಿಜ0ಯದ ಇತಿಹಾಸದಲ್ಲೇ, ದೇಶವು ತಮ್ಮನ್ನು ಎಲ್ಲಾ ಕಷ್ಟಗಳಿಂದ ವಿಮೋಚಿಸುವ ವಿಮೋಚಕನಿಗಾಗಿ ಕಾದುಕೊಂಡಿತ್ತು. ಅಂಥವರು ಕೆಲವರಿದ್ದರೂ, ಅವರೆಲ್ಲರೂ ಮಾನುಷಮಾತ್ರದವರು ಆಗಿದ್ದದರಿಂದ ಅವರ ಕೃತ್ಯಗಳು ಮಿತಿ0ಯಲ್ಲಿದ್ದವು. ಇಸ್ರಾ0ಯೇಲಿನಲ್ಲಿ ದೀರ್ಘಕಾಲ ಅರಸನಾಗಿ ಆಳಲು ಬರಲಿರುವ ರಾಜನ ಬಗ್ಗೆ ಮುಂತಿಳಿಸಿದರು. ಆತನು ಸರ್ವ ವಿಷ0ಯದಲ್ಲಿ ಜ0ಯಶಾಲಿ0ಯಾಗಿ0ಯೂ, ಗೆಲ್ಲುವವನಾಗಿ0ಯೂ ಇರುವನು. ಇಲ್ಲಿ ಅಂಥಹ ವಾಗ್ದಾನಗಳಲ್ಲಿ ಒಂದನ್ನು ಕೊಟ್ಟಿರುತ್ತದೆ.

“ಒಂದು ಮಗು ನಮಗಾಗಿ ಹುಟ್ಟಿದೆ0ಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವುದು; ಅದ್ಭುತಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿ0ಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬುದು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿ0ಯಾಗುವುದು; ದಾವೀದನ ರಾಜ್ಯದಲ್ಲಿ ನಿತ್ಯಸಮಾಧಾನವಿರುವುದು, ಆ ರಾಜ್ಯವು ಇಂದಿನಿಂದ 0ಯಾವಾಗಲೂ ನೀತಿ ನ್ಯಾ0ಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು; ಸೇನಾಧೀಶ್ವರನಾದ 0ಯೆಹೋವನ ಅನುಗ್ರಹವು ಇದನ್ನು ನೆರವೇರಿಸುವುದು” (0ಯೆಶಾ0ಯ 9:6–7).

0ಯೆಹೂದ್ಯರು 0ಯಾವಾಗಲಾದರೂ ಕಷ್ಟಗಳಲ್ಲಿರುವುದಾದರೆ, ಅಂಥಹ ಸಂದರ್ಭಗಳಲ್ಲಿ ಇಂತಹ ವಾಗ್ದಾನವನ್ನು ಹುಡುಕಿ ಬರಬೇಕಾದ ಮೆಸ್ಸೀ0ಯನಿಗಾಗಿ ಕಾದುಕೊಂಡಿರುವರು. ಅವರು ಆತನು ಸಮಸ್ತವನ್ನೂ ಜಯಿಸುವ ಅರಸನೆಂದೂ, ಅನೇಕ ಸಂದರ್ಭಗಳಲ್ಲಿ ಇವರು ಸಣ್ಣ ದೇಶವಾಗಿದ್ದರೂ, ಇತರ ತಮಗಿಂತ ಬಲಹೊಂದಿದ್ದ ಇತರ ರಾಜ್ಯಗಳನ್ನು ಸೋಲಿಸಿರುವ ಸಂದರ್ಭಗಳು ಇವೆ.

0ಯೆಹೂದ್ಯರು ತಮ್ಮ ಮೇಲೆ ದೊರೆತನ ನಡೆಸುತ್ತಿದ್ದ ಗ್ರೀಕರನ್ನು ದೇಶದ ಕ್ರಾಂತಿ0ಯಲ್ಲಿ ಕ್ರಿಸ್ತನ ಜನನಕ್ಕಿಂತ ಸುಮಾರು 150 ವರ್ಷಗಳ ಹಿಂದೆ0ಯೇ ಸೋಲಿಸಿಬಿಟ್ಟಿದ್ದರು. ಮೆಕ್ಕಾಬೀಸ್ ಎಂಬ ಕುಟುಂಬವು ನಡೆಸುತ್ತಿದ್ದ ಮತದ ಅಧೀನದಲ್ಲಿ ಆಳಲ್ಪಟ್ಟರು. ರೋಮನ್ನರು ಅದನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಾಗ, ಅವರು ತಮ್ಮದೇ ಆದ ‘ಜೂಯಿಷ್ ರಿಪಬ್ಲಿಕ್’ ಎಂಬದನ್ನು ಸ್ಥಾಪಿಸಿದರು. ಅದೂ ಸಹ ಕೆಲವು ಕಾಲ ಮಾತ್ರ ನಿಂತಿತ್ತು. ಅವರ ಮೇಲೆ ಸೈನ್ಯಾಧಿಕಾರ ನಡೆಸಲು 0ಯೆಹೂದ ಸಮಾಜವು ಸಿದ್ಧವಾಯಿತು. ಸರ್ವಶಕ್ತನಾದ ಪರಲೋಕದ ನಾ0ಯಕನು ಅವರು ಆಶಿಸುವಂತಹವನು.

# ಆಳವಾದ ಸಮಸ್ಯೆಗಳು :–

ದೇಶದ ಅರಸಾಳ್ವಿಕೆ ಅಥವಾ ರಾಜಕೀ0ಯ ಸ್ವಾತಂತ್ರ್ಯಕ್ಕಿಂತ ಅತ್ಯಂತ ದೊಡ್ಡ ಸಮಸ್ಯೆ0ಯನ್ನು ಅವರ ಮೆಸ್ಸೀ0ಯನು ಬಂದಾಗ ಎದುರಿಸಬೇಕಿತ್ತು. 0ಯೇಸುವು ಇಡೀ ಲೋಕದ ಎಲ್ಲರ ಅತಿದೊಡ್ಡ ಶತೃವಾದ ಪಾಪವೆಂಬ ಸಮಸ್ಯೆ0ಯನ್ನು ಎದುರಿಸಬೇಕಿತ್ತು. ಅದು ಎಲ್ಲರ ಮೇಲೆ ದೊರೆತನ ನಡೆಸುತ್ತಿತ್ತು. ಅದನ್ನು ಸಂಧಿಸಿ, ಜಯಿಸದ ಹೊರತು ಬೇರೇನು ಮಾಡಲು ಅಸಾಧ್ಯವಾಗಿತ್ತು. 0ಯೇಸುವು ಪಾಪವನ್ನೂ ಅದರ ಪರಿಣಾಮವಾದ ಮರಣವನ್ನು ಜಯಿಸಿದ ನಂತರವೇ ಇಸ್ರಾ0ಯೇಲ್ಯರಿಗೆ ದೇವರ ರಾಜ್ಯವನ್ನು ತಿರುಗಿ ಕೊಡಲು ಸಾಧ್ಯ. ಅವರ ಪಿತ್ರಾರ್ಜಿತ ಸ್ವಾಸ್ಥ್ಯವನ್ನು ಹಿಂತಿರುಗಿಸಲು ಸಾಧ್ಯ. ಮೊದಲಿನ ಕಾರ್ಯವನ್ನು ಮಾಡದೆ0ಯೇ ಎರಡನೆ0ಯದನ್ನು ಮಾಡುವುದು ಅಸಾಧ್ಯವಾದುದಾಗಿತ್ತು.

0ಯೇಸುವು ದೇವರ ರಾಜ್ಯವು ಸಮೀಪದಲ್ಲಿದೆ ಎಂದು ಪ್ರಸಂಗಿಸುತ್ತಾ ಬಂದನು. 0ಯಾಕಂದರೆ ಆತನು ದೇವರಿಂದ ನೇಮಿಸಲ್ಪಟ್ಟವನು ಆಗಿದ್ದನು. ಆತನು ಆ ದೇಶವನ್ನು ಮತ್ತು ಇಡೀ ಪ್ರಪಂಚವನ್ನೇ ಪಾಪ ಮತ್ತು ಮರಣದ ಆಳ್ವಿಕೆಯಿಂದ ಬಿಡಿಸಲೂ–ಎಲ್ಲರಿಗೂ ಸ್ವತಂತ್ರ್ಯವನ್ನೂ, ಬಿಡುಗಡೆ0ಯನ್ನೂ ಒದಗಿಸುವ ರಕ್ಷಣೆ0ಯನ್ನು ಕೊಡಲೂ ಬಂದನು. ಆದರೆ ಆತನ ಸಮಕಾಲೀನರಲ್ಲಿ ಅನೇಕರು ಬರೇ ರಾಜಕೀ0ಯ ಸಂಬಂಧದಲ್ಲಿ ಮಾತ್ರ ಅರ್ಥಮಾಡಿಕೊಂಡರು. ಅವರು ಮೊದಲು ಸ್ವತಂತ್ರ ದೇಶವಾಗಲೂ ಆಶೆಪಟ್ಟರು. ಆದರೆ ರಕ್ಷಣೆ0ಯು ಬಲಿಗಳ ಮೂಲಕವೇ ಎಂಬ ಅವರ ಪಿತ್ರಾರ್ಜಿತ ದಾರಿಗಳಿಗೇ ಹೊಂದಿಕೊಂಡಿದ್ದರು. ಆದ್ದರಿಂದಲೇ ಅವರು ದೇವರು ಕೊಟ್ಟ ಮೆಸ್ಸೀ0ಯನನ್ನು ತಳ್ಳಿ, ರೋಮನ್ನರಿಂದ ಆತನನ್ನು ಶಿಲುಬೆ0ಯಲ್ಲಿ ಹಾಕಿಸಿ ಕೊಂದರು.

# ಇಸ್ರಾ0ಯೇಲೇ ಯಾಕೆ ?



ದೇವರು ಆರಂಭದಲ್ಲಿ0ಯೇ ಅಂತ್ಯವನ್ನು ತಿಳಿದಿರುವಾತನು. ಆತನಿಗೆ 0ಯಾವುದು ಆಶ್ಚರ್ಯವಲ್ಲ. ಇತರ ದೇಶಗಳು ಒಂದುವೇಳೆ ಇನ್ನೂ ಆತನಿಗೆ ಹೆಚ್ಚಾಗಿ ಸಹಕರಿಸಿ ಆತನ ಕಾರ್ಯವು ಅನುಕೂಲವಾಗಲು



ಸಹಾಯಿಸಬಲ್ಲವಾಗಿದ್ದಿರಬಹುದು, ಆದರೆ ಆತನು ಏಕೆ ಇಸ್ರಾಯೇಲ್ ದೇಶವನ್ನೇ ಆರಿಸಿಕೊಂಡನು?

ಆ ರೀತಿಯಲ್ಲಿ ನಮ್ಮನ್ನು ನಾವೇ ವಂಚಿಸಿಕೊಳ್ಳುವವರಾಗಿರಬಾರದು. ಇಸ್ರಾಯೇಲ್ಯರು ಮಾನವಕುಲಕ್ಕೆಲ್ಲಾ ಪ್ರತಿನಿಧಿಗಳಾಗಿದ್ದಾರೆ. ಆ ಸಂದರ್ಭದಲ್ಲಿ ಅವರು ಮಾಡಿದ್ದನ್ನೇ ನಾವೂ ಮಾಡಿದ್ದಿರಬಹುದು. ಪ್ರತಿಯೊಬ್ಬನೂ ತನ್ನ ದೇಶದ ಹಾಗೂ ವೈಯಕ್ತಿಕ ಸ್ವಂತ ಆಸಕ್ತಿಯನ್ನು ಮೊದಲು ತೋರಿಸುವನು, ಆದ್ದರಿಂದಲೇ ಪ್ರಪಂಚದಲ್ಲಿ ಇನ್ನೂ ಯುದ್ಧಗಳಾಗುತ್ತಿವೆ.

ಈ ಜನಾಂಗವು ಭೂಮಿಯ ಮಧ್ಯದಲ್ಲಿ ಸ್ಥಳ ಹಿಡಿದಿರುವುದರಿಂದಲೇ ಇತರ ಜನಾಂಗಗಳು 0ಯೆಹೂದಿಗಳನು ಇಣಕಿ ನೋಡುತ್ತಲೇ ಇದ್ದಾರೆ. ದೇವರು ಅವರನ್ನು ವಿಭಿನ್ನತೆ0ಯುಳ್ಳವರನ್ನಾಗಿ ಪರಿಶುದ್ಧ, ಮೀಸಲಾದ ಜನಾಂಗವಾಗಿ0ಯೂ, ರಾಜವಂಶಸ್ಥರನ್ನಾಗಿ0ಯೂ ಆರಿಸಿಕೊಂಡಿರುತ್ತಾನೆ. ಆ ವಿಭಿನ್ನತೆಗಳು ಉದ್ದೇಶಪೂರ್ವಕವಾದವುಗಳು. ಆದ್ದರಿಂದ ಆತನು ಏತಕ್ಕಾಗಿ ನಮ್ಮನ್ನು 0ಯಾವ ದೇಶದ ಅನನ್ಯತೆ0ಯಾಗಿದ್ದರೂ ಆರಿಸಿಕೊಳ್ಳದೆ ಅವರನ್ನೇ ಏಕೆ ಆರಿಸಿಕೊಂಡಿರುತ್ತಾನೆ? ಉತ್ತರವು ಇಲ್ಲಿದೆ:

"ನಿಮ್ಮನ್ನು ಎಲ್ಲಾ ಜನಾಂಗಗಳಲ್ಲಿ ಹೆಚ್ಚುಮಂದಿ ಎಂದು ಇಷ್ಟಪಟ್ಟು ಆದುಕೊಳ್ಳಲಿಲ್ಲ; ನೀವು ಎಲ್ಲಾ ಜನಾಂಗಗಳಿಗಿಂತಲೂ ಸ್ವಲ್ಪ ಮಂದಿ0ಯಷ್ಟೆ. 0ಯೆಹೋವನು ನಿಮ್ಮನ್ನು ಪ್ರೀತಿಸಿ ತಾನು ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಬೇಕೆಂದು ಐಗುಪ್ತರ ಅರಸನಾದ ಫರೋಹನ ಕೈಕೆಳಗೆ ದಾಸರಾಗಿದ್ದ ನಿಮ್ಮನ್ನು ಬಿಡುಗಡೆಮಾಡಿ ತನ್ನ ಭುಜಬಲವನ್ನು ಪ್ರಯೋಗಿಸಿ ಆ ದೇಶದೊಳಗಿಂದ ಬರಮಾಡಿದನು.

ಅದದ್ದರಿಂದ ನಿಮ್ಮ ದೇವರಾದ 0ಯೆಹೋವನೊಬ್ಬನೇ ದೇವರೆಂದು ತಿಳಿದುಕೊಳ್ಳಬೇಕು, ಆತನು ನಂಬಿಗಸ್ತನಾದ ದೇವರು; ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗಳನ್ನು ಅನುಸರಿಸುವವರಿಗೆ ಮಾಡಿದ ವಾಗ್ದಾನವನ್ನೂ ಕೃಪೆ0ಯನ್ನೂ ಅವರ ಸಂತತಿ0ಯುವರಲ್ಲಿ ಸಾವಿರ ತಲೆಗಳವರೆಗೂ ನೆರವೇರಿಸುವವನಾಗಿ0ಯೂ ತನ್ನನ್ನು ತಿರಸ್ಕರಿಸಿದವರಿಗೆ ಪ್ರತಿ0ಯಾಗಿ ನಾಶವನ್ನುಂಟು ಮಾಡುವವನಾಗಿ0ಯೂ ಇದ್ದಾನೆಂದು ತಿಳಿದುಕೊಳ್ಳಿರಿ" (ಧರ್ಮೋಪದೇಶಕಾಂಡ 7:7–10).

ದೇವರು ಇಸ್ರಾಯೇಲ್ಯರನ್ನು ಆರಿಸಿಕೊಂಡದ್ದು:

* ಅವರನ್ನು ಆತನು ಪ್ರೀತಿಸಿದನು,
* ಪಿತೃಗಳಿಗೆ, ಅವರ ಸಂತತಿಗಾಗಿ ಮಾಡಿದ ವಾಗ್ದಾನವನ್ನು ನೆರವೇರಿಸಲು,
* ಐಗುಪ್ತದಲ್ಲಿ ದಾಸರಾಗಿದ್ದ ಅವರನ್ನು ಬಿಡುಗಡೆಮಾಡಲು,
* ದೇವರು ಒಡಂಬಡಿಕೆ0ಯನ್ನು ನೆರವೇರಿಸಲು ನಂಬಿಗಸ್ತನು,
* ಆತನು ತನ್ನ ಜನರಿಂದ ಪ್ರೀತಿ0ಯನ್ನು ಎದುರುನೋಡುತ್ತಾನೆ.

# ಒಡಂಬಡಿಕೆಯ ವಾಗ್ದಾನಗಳು :–

ಸತ್ಯವೇದದಲ್ಲಿ ದೇವರು ತನ್ನನ್ನು ಹೀಗೆ0ಯೇ ಪ್ರಕಟಿಸಿಕೊಂಡನು. ಆತನು ಏಕೆ ಕಾರ್ಯಗಳನ್ನು ಮಾಡಿದನೆಂದೂ ಮಾಡುತ್ತಿರವನೆಂದೂ, ಇನ್ನೂ ಮುಂದೆ0ಯೂ ಮಾಡುವವನೆಂದೂ ವಿವರಿಸುತ್ತಾನೆ, ಹೀಗೆ ಆತನನ್ನು ಅರಿತುಕೊಳ್ಳಬಹುದು. ದೇವರ ವಿವರಣೆ0ಯ ಮಾರ್ಗವನ್ನು ಅನುಸರಿಸುತ್ತಾ ಬರುವುದಾದರೆ ದೇವರು 0ಯೆಹೂದಿ ಜನಾಂಗದ ಲೌಕೀಕ ತಂದೆ0ಯಾದ ಅಬ್ರಹಾಮನಿಗೆ

ದೊಡ್ಡವಾಗ್ದಾನಗಳನ್ನು ಮಾಡಿದ್ದನ್ನು ಕಂಡುಕೊಳ್ಳುತ್ತೇವೆ. ಈಗಿನ ಇಸ್ರಾ0ಯೇಲೆಂದು ಕರೆ0ಯಲ್ಪಡುವ ಕಾನಾನ್ ದೇಶಕ್ಕೆ ಹೋಗಬೇಕೆಂದು ದೇವರಿಂದ ಕರೆ0ಯಲ್ಪಟ್ಟನು. ಆತನು ದೊಡ್ಡವಿಶ್ವಾಸದ ಮನುಷ್ಯನು ಆಗಿದ್ದದರಿಂದ ಅಬ್ರಹಾಮನಿಗೆ ದೇವರು ಭವಿಷ್ಯದ ಬಗ್ಗೆ ಏಳುಸಾರಿ ವಾಗ್ದಾನಗಳನ್ನು ಕೊಟ್ಟನು. ಅಬ್ರಹಾಮನು ಅದನ್ನು ನಂಬಿ ಅದರಂತೆ0ಯೇ ನೆಡೆದನು, ಆತನು ತನ್ನ ಎಲ್ಲಾ ನಂಬಿಕೆ0ಯನ್ನು ಭರವಸೆ0ಯನ್ನು ದೇವರಲ್ಲಿ0ಯೇ ಇಟ್ಟನು.

ಅಬ್ರಹಾಮನ ಸಂತತಿ0ಯು ಒಂದು ಜನಾಂಗವಾಗುವ ಬಗ್ಗೆ(ಆದಿಕಾಂಡ 12:1–3), ಅದರ ಮೂಲಕ ಮಾನವ ಕುಲಕ್ಕೆ ಆಶೀರ್ವಾದವಾಗುವಬಗ್ಗೆ, ಅವರು ಕಾನಾನ್ ದೇಶವನ್ನು ಸ್ವತಂತ್ರಿಸಿಕೊಳ್ಳುವರೆಂದೂ(ಆದಿಕಾಂಡ 12:7, 13:14–17), ಅವರು ಮೊದಲು ಅನ್ಯರಂತಿದ್ದು ನಂತರ ಬೇರೊಂದು ಕಡೆ(ಆದಿಕಾಂಡ 15:13–16, ಅದು ಐಗುಪ್ತವಾಗಿತ್ತು) ಜನಾಂಗವನ್ನಾಗಿ ಮಾಡಲ್ಪಡುವರೆಂದೂ, ಅದರಲ್ಲಿ ಒಬ್ಬನ ಸಂತತಿ0ಯು ಲೋಕದಲ್ಲಿನ ಅವರ ಇತರ ಎಲ್ಲಾ ವೈರಿಗಳ ಮೇಲೆ ಜ0ಯವನ್ನು ಹೊಂದುವರೆಂದೂ(ಆದಿಕಾಂಡ 22:15_18) ವಾಗ್ದಾನ ಮಾಡಿದನು.

ಕೊನೆ0ಯ ಆ ವಾಗ್ದಾನಗಳು ಆಣೆ0ಯೊಂದಿಗಿನ ವಾಗ್ದಾನ ಅಂದರೆ ದೇವರು ಅಬ್ರಹಾಮನಿಗೆ ಆಣೆಯಿಟ್ಟು ಅದು ನಡೆ0ಯುವುದೆಂಬದನ್ನೂ, ಇತರ ಎಲ್ಲಾ ವಾಗ್ದಾನಗಳಲ್ಲಿ ಈ ಅತ್ಯಂತ ಗಂಭೀರವಾದ ವಾಗ್ದಾನವು ನೆರವೇರುವುದು ಸತ್ಯವೆಂದು ಹೇಳಿದನು.

“0ಯೆಹೋವನು ನುಡಿದದ್ದನ್ನು ಕೇಳು; ನೀನು ನಿನ್ನ ಒಬ್ಬನೇ ಮಗನನ್ನು ಸಮರ್ಪಿಸುವುದಕ್ಕೆ ಹಿಂದೆಗೆ0ಯದೆ ಹೋದದ್ದರಿಂದ ನಾನು ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು; ನಿನ್ನ ಸಂತತಿ0ಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ ನಕ್ಷತ್ರಗಳಂತೆ0ಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆ0ಯೂ ಅಸಂಖ್ಯವಾಗಿ ಮಾಡುವೆನು; ಅವರು ಶತೃಗಳ ಪಟ್ಟಣಗಳನ್ನು ಸ್ವಾಧೀನ ಮಾಡಿಕೊಳ್ಳುವರು. ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿ0ಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿ0ಯ ಮೂಲಕ ಆಶೀರ್ವಾದವುಂಟಾಗುವುದು ಎಂಬದಾಗಿ 0ಯೆಹೋವನು ತನ್ನಾಣೆಯಿಟ್ಟು ಹೇಳಿದ್ದಾನೆ ಅಂದನು” (ಆದಿಕಾಂಡ 22:16–18).

ಆದ್ದರಿಂದಲೇ ದೇವರು ಇಸ್ರಾ0ಯೇಲ್ಯರನ್ನು ಒಂದು ಜನಾಂಗವಾಗಿ ಆರಿಸಿಕೊಂಡನು ಅದರ ಮೂಲಕ ಅಬ್ರಹಾಮನ ಅನೇಕ ಸಂತತಿಗಳನ್ನೂ–ಜನ್ಮದಿಂದ ಅಬ್ರಹಾಮನ ಸಂತಾನದವರಾದರೂ, ಎಲ್ಲಾ ಜನಾಂಗದಿಂದ 0ಯಾರು ವಿಧೇ0ಯತೆ0ಯ ಈ ಉದಾಹರಣೆ0ಯನ್ನು ಅನುಸರಿಸುತ್ತಾರೋ ಅವರಿಗೂ ಅಬ್ರಹಾಮನ ಸಂತತಿ0ಯಾಗಲು ದೇವರು ಅವನನ್ನು ಆರಿಸಿಕೊಂಡನು. ದೇವರ ವಾಗ್ದಾನಗಳನ್ನು ನಂಬುವವರೆಲ್ಲರಿಗೂ(ರೋಮಾಪುರದವರಿಗೆ 4:11) ಅವನು ತಂದೆ0ಯಾದನು. ಅನಂತರದಲ್ಲಿ ಅಪೋಸ್ತಲನಾದ ಪೌಲನು ಅದನ್ನು ವಿವರಿಸುತ್ತಾ–ಅಬ್ರಹಾಮನ ಸಂತತಿಯಿಂದ ಬರಲಿದ್ದ ಒಬ್ಬ ವಿಶೇಷವಾದವನು ಅಂದರೆ 0ಯೇಸುಕ್ರಿಸ್ತನ ಬಗ್ಗೆ ಹೇಳಿರುತ್ತಾನೆ.

**“ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ, ಆ ಒಬ್ಬನು ಕ್ರಿಸ್ತನೇ”** (ಗಲಾತ್ಯದವರಿಗೆ 3:16).

–0–0–0–



# ಜೇಡರ ಹುಳುವಿನ ಈಜಿನೊಡನೆ ವಿಕಾಸವಾದ.

## “ಸುಮ್ಮನೆ ನಿಂತು ದೇವರ ಅದ್ಭುತಕಾರ್ಯಗಳನ್ನು ಧ್ಯಾನಿಸು” (0ಯೋಬ 37:14).

ಕದಲದನೀರು ಆಳವಾಗಿ ಹರಿ0ಯುತ್ತದೆಂದು ಹೇಳುತ್ತಾರೆ. ನಾವು ಮೀನು ಹಿಡಿ0ಯುವಾಗ ಅದನ್ನು ನೋಡುತ್ತೇವೆ, ಅಂತೆ0ಯೇ ಅನೇಕ ಅನುಭವಗಳನ್ನು ನೋಡುತ್ತೇವೆ. ಉದಾಹರಣೆಗೆ: 0ಯುರೋಪಿನ ನೀರಿನ ಜೇಡರ ಹುಳು, ಮೆಲ್ಲನೆ ಹರಿದಾಡುವ ಈ ಚಿಕ್ಕ ಜೇಡರಹುಳು ನೀರಿನಡಿ0ಯಲ್ಲಿ ವಾ0ಯುವನ್ನು ಸೇವಿಸುತ್ತದೆ. ಈ 0ಯುಕ್ತಿ0ಯನ್ನು ಅದು ಹೇಗೆ ಕಲಿತಿದ್ದಿರಬಹುದೆಂದು ಆಶ್ಚ0ರ್ಯಪಡುವಿರಲ್ಲವೇ? ಅದು ನೀರಿನಲ್ಲಿ ಈಜಾಡುವ ಸಂದರ್ಭದಲ್ಲಿ ಒಂದು ನೀರುಗುಳ್ಳೆ0ಯನ್ನು ಪಡೆದುಕೊಂಡು ಈಜಾಡುತ್ತದೆ. ಅದರ ಬಾಯಿಂದ ಬರುವ ರೇಶ್ಮೆಯಿಂದ ಆಳಕ್ಕೆ ಹೋಗುವ ಒಂದು ಗಂಟೆ0ಯೋಪಾದಿ0ಯ ಗೂಡನ್ನು ಕಟ್ಟಿಕೊಳ್ಳುತ್ತದೆ. ದೇವರಿಲ್ಲವೆಂಬ ವಿಕಾಸವಾದವು, ಅದು ಈ ತರಹದ ಜ್ಞಾನವನ್ನು ತಾನೇ ಅನೇಕಾನೇಕ ಮಿಲಿ0ಯನ್ ವರ್ಷಗಳ ಅಭ್ಯಾಸದಿಂದ ಪಡಕೊಂಡಿದೆ ಎನ್ನಬಹುದು, ಆದರೆ ಪ್ರಶ್ನೆ0ಯೆಂದರೆ ಈ ಜ್ಞಾನವನ್ನು ಮೊದಲು ಅದು ಹೇಗೆ ಪಡಕೊಂಡಿತು ಎನ್ನುವುದೇ.

ಆದರೆ ಇದರಲ್ಲಿ ಇನ್ನೂ ಹೆಚ್ಚಿನದಿದೆ, ಏನಂದರೆ ಸಾಧಾರಣ ನೀರಿನಲ್ಲಿ ಆಮ್ಲಜನಕವು ತಾನೇ ನೀರಿನೊಳಗೆ ಬೆರೆತು ಅದರ ಪರಿಮಾಣವನ್ನು ಕಾಪಾಡುತ್ತದೆ. ಆದರೆ ನೀರಿನಲ್ಲಿನ ಆಮ್ಲಜನಕದ ಪರಿಮಾಣ ಸರಿ0ಯಾಗಿ ಇಲ್ಲದೆಡೆಗಳಲ್ಲಿ ಜೇಡರಹುಳುವು ತಾನೇ ನೀರಿನ ಗುಳ್ಳೆಗಳನ್ನು ಅಳವಡಿಸಿ ಕೊಂಡು ನೀರಿನ ಮೇಲ್ಮಟ್ಟಕ್ಕೆ ಬಂದು ಆ ಗೂಡಿನಲ್ಲಿ ಆಮ್ಲಜನಕವನ್ನು ತುಂಬಿಸಿಕೊಳ್ಳುತ್ತದೆ.



ಇನ್ನೊಮ್ಮೆ ಈ ಚಿಕ್ಕ ಜಂತುವಿನ ವಿವೇಕವು ಸಾಧಾರಣ ಜೇಡಕ್ಕಿಂತ ಅಧಿಕವಾಗಿ ಎಷ್ಟೋ ವರ್ಷಗಳ ಅವಧಿಗೂ ಹೆಚ್ಚಾಗಿ ಅದರಲ್ಲಿರುವುದು ನಾವು ನೋಡುವ ಸಾಕ್ಷಿ0ಯಾಗಿದೆ. ಮಾನವರು ಆಳವಾದ ನೀರಿನಡಿ0ಯಲ್ಲಿ ಈಜಲು ಬೇಕಾದ ಕಾ0ರ್ಯಗಳಿಗೆ ಕಂಡುಹಿಡಿ0ಯುತ್ತಲೇ ಇರಬೇಕಾದಾಗ ಈ ಜೇಡರಹುಳು........?




ಮೇಲೆ ಬಲಕ್ಕೆ : ನೀರಿನ ಜೇಡವು ಅದರ ಹೊಟ್ಟೆ0ಯ ಸುತ್ತಲೂ ಗಾಳಿ0ಯ ಗುಳ್ಳೆ0ಯೊಡನೆ.
ಬಲಕ್ಕೆ : ಗಾಳಿ0ಯ ಸಾಗಣೆ.
ತಳದಿಂದ ಬಲಕ್ಕೆ : ಆಳಕ್ಕೆ ಈಜುವ ಗಂಟೆ0ಯ ಗೂಡಿನ ಜೊತೆ0ಯಲ್ಲಿ ಜೇಡ.
ಕೆಳಗಡೆ : ಆಳಕ್ಕೆ ಈಜುವ ಗಂಟೆ0ಯೊಳಗೆ ಜೇಡ

# ಇಡೀ ಪ್ರಪಂಚದ ಭಯ ಹಾಗೂ ಯೇಸುವಿನ ಬರೋಣ

## (ಪ್ರತಿಬಿಂಬ)

18ನೇ ಶತಮಾನದ ಅಂತ್ಯದಲ್ಲಿ ಜಾನ್ ಆಡವ್ಸ್ ಅಮೇರಿಕ ದೇಶದ ಅಧ್ಯಕ್ಷರಾಗಿರುವಾಗ ಮೆಸಾಚುಸೆಟ್ಟಿನ ವೋಬರ್ನಿನಲ್ಲಿನ ಕಾಲ್ವನಿಸ್ಟ್ ಬ್ಯಾಪಿಸ್ಟ್ ಚಾಪೆಲ್ಲಿನಲ್ಲಿ ಎಲಿ0ಯಾಸ್ ಸ್ಮಿತ್ ಎಂಬ ಬೋಧಕರು ಸತ್ಯವೇದದಿಂದ ಪ್ರಸಂಗಿಸುತ್ತಿದ್ದರು. ಅವರು ಕ್ಯಾಟಕಿಸವ್(ಕ್ರೈಸ್ತ ಪ್ರಶ್ನೋತ್ತರ ಪುಸ್ತಕ)ನಿಂದ ಪ್ರಸಂಗಿಸಲಿಕ್ಕಾಗಿ ಸಂಬಳ ಕೊಡಲಾಗುತ್ತಿತ್ತು, ಆದರೆ ಅದರಲ್ಲಿ ಕಠಿಣ ಅಸಾಧ್ಯತೆಗಳನ್ನು ಒಳಗೊಂಡಿದ್ದ, ಸತ್ಯವೇದಕ್ಕೆ ತದ್ವಿರುದ್ಧವಾದದ್ದು ಅಡಗಿತ್ತು. ಆದ್ದರಿಂದ ಅವರು ಸತ್ಯವೇದದಿಂದಲೇ ಸತ್ಯಗಳನ್ನು ಬೋಧಿಸತೊಡಗಿದರು. ಈ ವಿಷ0ಯ ಬೋಸ್ಟನ್ನಿನಲ್ಲಿದ್ದ ಬಿಷಪ್ಪುಗಳಿಗೆ ತಿಳಿ0ಯಬಂದು ಅವರು ನನ್ನನ್ನು ಕೆಲಸದಿಂದ ತೆಗೆದುಹಾಕುವವರೆಗೆ ಈ ಕಾ0ರ್ಯ ನಡೆಸುತ್ತಲಿದ್ದೆ ಎಂದು ತಿಳಿಸಿದ್ದಾರೆ. ಸುಮಾರು 200 ವರ್ಷಗಳ ಹಿಂದಣ ಆ ಸಭೆ0ಯಲ್ಲಿ ಕೊಟ್ಟ ಪ್ರಸಂಗದಲ್ಲಿನ ವಿಷ0ಯಗಳು ಮಧ್ಯ ಪೂರ್ವಾರ್ತ್ಯದಲ್ಲಿ 2003ರಲ್ಲಿ0ಯೂ ಮತ್ತು ಈಗಲೂ ಇರುವುದು ತಿಳಿದುಬರುತ್ತದೆ, ಅವರು ಅಂದುಕೊಟ್ಟ ಅನೇಕ ವ್ಯಾಖ್ಯಾನಗಳು ಇಂದಿಗೂ ಅನ್ವಯಿಸುವುದು ಆಶ್ಚ0ರ್ಯಕರವಾಗಿದೆ.

ಟೈಟಸನು 0ಯೆರೂಸಲೇಮನ್ನು ಕೈಹಿಡಿದಾಗಿನಿಂದ 0ಯೆಹೂದ್ಯರು ಪ್ರಪಂಚದ ಎಲ್ಲಾಕಡೆಗೆ ಚದುರಿಸಲ್ಪಟ್ಟಿದ್ದಾರೆ, ಅನೇಕ ದೇಶಗಳಲ್ಲಿ ಅನೇಕ ಕಾಲಘಟ್ಟಗಳಲ್ಲಿ ಅವರು ಭ0ಯಂಕರ ಕ್ರೂರವಾಗಿ ನಡೆಸಲ್ಪಟ್ಟಿರುತ್ತಾರೆ. ಅವರು ಇಷ್ಟೆಲ್ಲಾ ಸಂಭವಿಸಿ ಕಷ್ಟ ಅನುಭವಿಸಿದರೂ, ತಮ್ಮ ಕಾನಾನ್ ದೇಶಕ್ಕೆ ಹೋಗುವ ಉದ್ದೇಶವನ್ನು ಅವರ ಪ್ರವಾದಿಗಳ ಪ್ರವಾದನೆಗಳಂತೆ ಹಿಡಿದೇ ಇದ್ದಾರೆ. ಆ ದಿನ ಬಂದಾಗ ಫಿಲಿಷ್ಟಿ0ಯರ(ಪ್ಯಾಲಸ್ತೀನರ) ಭುಜಗಳ ಮೇಲೆ ಕುಳಿತು ಆ ವಾಗ್ದಾನ ದೇಶಕ್ಕೆ ಹಾರಿಹೋಗುವುದರಲ್ಲಿ 0ಯಾವ ಕಷ್ಟವೂ ಇರುವುದಿಲ್ಲವೆಂಬುದು ಅವರಿಗೆ ಗೊತ್ತು.

0ಯೆಹೂದ್ಯರು ಅಲ್ಲಿಗೆ ಹೋಗುವುದಕ್ಕೆ ಮುಖ್ಯ ತಡೆ0ಯೇನೆಂದರೆ ಈ ದೇಶವನ್ನು ಈಗ ಕೈಹಿಡಿದಿರುವ ತುರ್ಕಿಗಳೇ, 0ಯೆಹೂದ್ಯರು ಹಿಂತಿರುಗುವ ಮುನ್ನ ಅವರ ಬಲವು ಮುರಿದು ಹೋಗಬೇಕು, ಹೋಗುತ್ತದೆ. 0ಯಾಕಂದರೆ ಅವರು ಎಂದೂ ಈ ಜನಾಂಗಕ್ಕೆ ವಿರೋಧವಾಗಿ0ಯೇ ನಿಂತವರು. ಹೇಗಾದರೂ ಈ ತಿರ್ಕಿ0ಯರು ಆ ದೇಶವನ್ನು ಅವರಿಗೇ ಒಪ್ಪಿಸಿಕೊಟ್ಟು, 0ಯೆಹೂದ್ಯರು ಅವರಿಗೆ ಭ0ಯಪಡದಿರುವುದರಿಂದ ಅವರು ದೂರಕ್ಕೆ ಸರಿ0ಯುತ್ತಾರೆ. ಹೇಗೆ ಒಬ್ಬ ಅನ್ಯನು(ರೋಮನ್ ಟೈಟಸನು)ಅವರನ್ನು ಹೊರಕ್ಕೆ ತಂದನೋ



ಹಾಗೆ0ಯೇ ಒಬ್ಬ ಅನ್ಯನು ಅವರನ್ನು ಹಿಂದಕ್ಕೆ ಕರಕೊಂಡು ಹೋಗುತ್ತಾನೆ. ಪ್ರವಾದನೆಗಳು ಹೇಳುವಂತೆ ಅವರೇ ತಮಗೊಬ್ಬ ನಾ0ಯಕನನ್ನು ಮಾಡಿಕೊಂಡು ಈಗ ಇರುವಲ್ಲಿಂದ ಹೊರಕ್ಕೆ ತೆಗೆದುಕೊಂಡು ಹೋಗುವರು. ಹೊಶೇ0ಯ 1:11ರಲ್ಲಿ ಹೇಳುವ ಸಮ0ಯಕ್ಕೆ ಇದು ಹೊಂದುವುದಿಲ್ಲ. ಅದನ್ನು ನಾನು ಹೇಳಲಾಗುವುದಿಲ್ಲ.

## ಮನುಷ್ಯಕುಮಾರನ ಬರೋಣ :-

0ಯುರೋಪ್, ಏಷ್ಯಾ, ಆಫ್ರಿಕಾ ಮತ್ತು ಅಮೇರಿಕಾದಲ್ಲಿ ವಾಸಿಸುವವರು- ಪ್ರತಿ 0ಯೆಹೂದ್ಯನೂ ತನ್ನ ತಾ0ಯ್ನಾಡಿಗೆ ಹಿಂದಿರುಗಬೇಕೆಂಬ ಸಾರೋಣವನ್ನು ಅತ್ಯಂತ ಶೀಘ್ರದಲ್ಲೇ ಕೇಳಲಿರುವ ಆದಿನವು ಎಂಥಾ ಅದ್ಭುತವಾದದ್ದು. ಇವರನ್ನು ತಮ್ಮ ಪಿತೃಗಳ ದೇಶಕ್ಕೆ ದೊಡ್ಡ ಗುಂಪಾಗಿ ಹಿಂತಿರುಗಲಿಕ್ಕಾಗಿ ಈ ಕರೆ! ಇಂತಹ ಸಮ0ಯವು ಆತನಲ್ಲಿ ನಂಬಿಕೆಯಿಡುವ ಎಲ್ಲ ಅನ್ಯಜನರೂ ಆತನ ಜನರೊಟ್ಟಿಗೆ ಸಂತೋಷಿಸುವ ಸುದಿನ. 0ಯಾಕಂದರೆ ಕರ್ತನು ಅವರನ್ನು ಸಂಧಿಸಿದನು ಹಾಗೂ ಇದೇ ಮನುಷ್ಯಕುಮಾರನು ಭೂಮಿಗೆ ಬರುವುದೂ ಹಾಗೂ ಭೂಮಿ0ಯ ಎಲ್ಲಾ ಕಡೆಗಳಲ್ಲೂ 0ಯುದ್ಧಗಳು ನಿಲ್ಲುವುದನ್ನೂ, ಎಲ್ಲಾ ಜನರು ಆತನನ್ನು ಆಶೀರ್ವದಿಸಲ್ಪಟ್ಟವನೆಂದು ಹೇಳುವರು. ***"ಕಣ್ಣೆತ್ತಿ ಸುತ್ತಲೂ ನೋಡು, ನಿನ್ನ ಮಕ್ಕಳೆಲ್ಲರೂ ಗುಂಪುಕೂಡಿ ನಿನ್ನ ಬಳಿಗೆ ಸೇರುತ್ತಿದ್ದಾರೆ; ಗಂಡುಮಕ್ಕಳು ದೂರದಿಂದ ಸಮೀಪಿಸುತ್ತಾರೆ, ಹೆಣ್ಣುಮಕ್ಕಳು ಕಂಕುಳಿನಲ್ಲಿ ಕುಳಿತು ಬರುತ್ತಾರೆ. ನೀನು ನೋಡಿ ಕಳೆಗೊಳ್ಳುವಿ, ನಿನ್ನ ಹೃದ0ಯವು ಅದರುತ್ತಾ ಉಬ್ಬುವುದು; ಏಕಂದರೆ ಸಮುದ್ರ ವ್ಯಾಪಾರಸಮೃದ್ಧಿ0ಯು ನಿನ್ನ ಕಡೆಗೆ ತಿರುಗುವುದು, ಜನಾಂಗಗಳ ಐಶ್ವ0ರ್ಯವು ನಿನಗೆ ದೊರೆ0ಯುವುದು" (0ಯೆಶಾ0ಯ 60:4-5).***

## ಗೋಗನು ಇಸ್ರಾ0ಯೇಲ್ಯರಿಗೆ ವಿರುದ್ಧವಾಗಿ ಬರುವುದು :-

0ಯೆಹೂದ್ಯರು ಹಿಂತಿರುಗಿ ಬರುವಾಗ ಎಲ್ಲರೂ ಮಾನಸಾಂತರ ಹೊಂದಿ 0ಯೇಸುಕ್ರಿಸ್ತನಿಗೆ ತಮ್ಮನ್ನು ಒಪ್ಪಿಸಿಕೊಡುವರು ಎಂದು ಅನೇಕರು ನಂಬುತ್ತಾರೆ, ಆದರೆ ಆಕಸ್ಮಿಕವಾದ ಒಂದು ದಂಗೆ0ಯು ಅನ್ಯರಿಂದುಂಟಾಗಿ ಇಸ್ರಾ0ಯೇಲ್ಯರನ್ನು ಜಯಿಸುವರು ಎಂದು ಪ್ರವಾದನೆ ಹೇಳುತ್ತದೆ, ಅವರ ಐಶ್ವ0ರ್ಯವನ್ನು ಕಬಳಿಸಿ, ಅವರಿಂದ ಅವರ ದೇಶವನ್ನು ತೆಗೆದುಕೊಳ್ಳುವರು, ಹಾಗೂ

ತೋರಿಕೆ0ಯಲ್ಲಿ ಜಯಿಸಿ, ಅವರ ಮಧ್ಯದಲ್ಲೇ ವಾಸಿಸುವರು. ಪ್ರವಾದನೆಗಳಲ್ಲಿ ಸ್ಪಷ್ಟವಾಗಿ ಹೇಳಿರುವಂತೆ 0ಯೆಹೂದ್ಯರು ತಮ್ಮ ಸ್ಥಳಕ್ಕೆ ಹಿಂತಿರುಗಿ ಬಂದು ಸಮಾಧಾನದಿಂದ ನೆಲೆಸಿರುವಾಗ, ಒಂದುಗೂಡಿದ ಒಂದು ಸೇನೆ0ಯು ಅವರಿಗೆ ವಿರೋಧವಾಗಿ ಬಂದು ಅವರನ್ನು ಜಯಿಸುವರು. ಈ ಸೈನ್ಯವು ಗೋಗನಿಂದ ನಡೆಸಲ್ಪಡುವುದು(0ಯೆಹೆಜ್ಕೇಲ 38). ಈ ಒಂದುಗೂಡಿದ ಸೈನ್ಯವು ಮೊಹಮ್ಮದನನ್ನು ನಂಬಿದ ದೇಶಗಳಿಗೆ ಸೇರಿದ್ದು. ಈ ಪ್ರವಾದನೆ0ಯು ಹೀಗೆ ಸ್ಪಷ್ಟಪಡಿಸುತ್ತದೆ. ಅವರ ದೇಶದಲ್ಲಿ ದೇವಜನವಾದ ಇಸ್ರಾಯೇಲ್ಯರಿಗೆ ವಿರುದ್ಧವಾಗಿ ಗೋಗನು ಏಳುವನು. ಅದು ಕಡೇದಿನದಲ್ಲಿ ನಡೆ0ಯುವುದು, ಈ ಸೇನೆ0ಯು 0ಯೆರೂಸಲೇಮನ್ನು ಮುತ್ತಿಗೆ ಇಡುವಾಗ ಅದು 0ಯೆಹೂದ್ಯರು ಎಂದೂ ಅನುಭವಿಸದ ಭ0ಯಂಕರವಾದ ಕಾಲವಾಗಿರುತ್ತದೆ. ತಮ್ಮನ್ನು ಸಂಪೂರ್ಣವಾಗಿ ಈ ವೈರಿಗಳು ನುಂಗಿಬಿಡುವಂತೆ ಕಂಡುಬರುವುದು. ಜೆಕರ್ಯ 14ರಲ್ಲಿ ಹೇಳಿರುವಂತ 0ಯೆರೂಸಲೇಮ್ ಪಟ್ಟಣದ ಅರ್ಧಭಾಗವನ್ನೇ ಗೋಗನೂ ಅವನ ಜತೆಗಿರುವ ದೊಡ್ಡ ಸೈನ್ಯವೂ ತೆಗೆದುಕೊಂಡು, 0ಯೆರೂಸಲೇಮನ್ನು ಹಿಡಿ0ಯುವ ಮುನ್ನ ಅಸಂಖ್ಯ 0ಯೆಹೂದ್ಯರನ್ನು ಕತ್ತರಿಸಿ ಹಾಕುವರು.

ಈ ಸಮ0ಯದಲ್ಲೇ ಕರ್ತನ ಪಾದಗಳು ಒಲೀವ ಎಣ್ಣೆಮರಗಳ ಬೆಟ್ಟದ ಮೇಲೆ ಬಂದು ನಿಲ್ಲುವುವು, ಅದು 0ಯೇಸುಕ್ರಿಸ್ತನು 0ಯೆರೂಸಲೇಮಿನ ಮೇಲೆ ತನ್ನ ಗೆಳೆ0ಯರ ಸಂತೋಷಕ್ಕಾಗಿ0ಯೂ, ವಿರೋಧಿಗಳ ಭ0ಯಕ್ಕೂ ಕಾರಣನಾಗಿ ಕಾಣಿಸಿಕೊಳ್ಳುವನು. 0ಯೆರೂಸಲೇಮಿನ ಮೇಲೆ ಆತನ ಪ್ರತ್ಯಕ್ಷತೆ0ಯು ಜತೆಗೆ ಭೂಮಿ0ಯ ಮೇಲೂ, ಸಮುದ್ರದಲ್ಲೂ ಎಂದೂ ಕಂಡುಬಂದಿರದ ಭೂಕಂಪಗಳೂ ಉಂಟಾಗಿ ಒಲೀವ ಬೆಟ್ಟವು ಇಬ್ಭಾಗವಾಗುವುದು. ಇದು ಎಂಥಾದಿನ! ಆತನು ಬರುವ ದಿನವನ್ನು 0ಯಾರು ತಾಳಾರು?

ಈ ಸಮ0ಯದಲ್ಲೇ ಕರ್ತನಾದ 0ಯೇಸುವು ಸಕಲಜನಾಂಗಗಳನ್ನು 0ಯೆಹೋಷಾಫಾಟನ ತಗ್ಗಿಗೆ ಸೇರಿಸಿ, ಅವರಿಗೆ ನ್ಯಾಯತೀರಿಸಿ, 0ಯೆಹೂದ್ಯರಿಗೂ, ಅನ್ಯರಿಗೂ ಇರುವ ವ್ಯತ್ಯಾಸವನ್ನು ತೋರಿಸುವನು. ಆತನು ಆಕಾಶದ ಮೇಘಗಳಲ್ಲಿ ತನ್ನ ಬಲ ಮತ್ತು ಮಹಾಮಹಿಮೆಯಿಂದ ಇಳಿದುಬರುವಾಗ 0ಯೆಹೂದ್ಯರು, ದೇವಜನರೂ ಈ ಮನುಷ್ಯನು ತಮ್ಮನ್ನಾಳಲು ಸಂತೋಷದಿಂದ ಅಂಗೀಕರಿಸುವರು. ಪ್ರಪಂಚವೂ 0ಯೆಹೂದ್ಯರೂ ಈ ರೀತಿ0ಯಲ್ಲಿ ತನ್ನನ್ನು ಅರಿತುಕೊಳ್ಳಬೇಕೆಂಬುದು ದೇವರ ಯೋಜನೆ. ಬಲವಾದ ಸೇನೆ0ಯ ಈ ಥಕ್ಕನೇ ನಡೆದ ಭ0ಯಂಕರವಾದ ಬೀಳುವಿಕೆ0ಯು ಭೂಮಿ0ಯ ಎಲ್ಲೆಡೆ0ಯಲ್ಲೂ 0ಯೇಸುವಿನ ಜ್ಞಾನವನ್ನು ಹರಡಲು ಮಾರ್ಗ ಮಾಡುವುದು. ಕ್ರಿಸ್ತನು ಬರುವಾಗ ಏನು ನಡೆ0ಯುವುದೋ ನೋಡೋಣ– ಆತನ ವೈರಿಗಳು ಧ್ವಂಸವಾಗುವರು, ಬೆಟ್ಟವು ಎರಡು ಭಾಗವಾಗುವುದು 0ಯೆಹೂದ್ಯರು ಬಿಡುಗಡೆ0ಯಾಗುವರು, ಭೂಮಿ0ಯಲ್ಲಿ ಕ್ರಿಸ್ತನ ಜ್ಞಾನವು ಹರಡಲು ಮಾರ್ಗವಾಗುವುದು, ಜತೆಗೆ ಆತನೇ ಸಾವಿರ ವರುಷ ಆಳ್ವಿಕೆ ನಡೆಸುವನು.



# ಸತ್ತವರನ್ನು ಕ್ರಿಸ್ತನು ಎಬ್ಬಿಸುವನು :–

ಗೋಗನ ಮಹಾಸೇನೆ0ಯ ಸಂಹಾರದೊಂದಿಗೆ ಕ್ರಿಸ್ತನು ಬರುವಾಗ ಮಾಡುವ ಮೊದಲ ಕಾರ್0ಯ, 0ಯೆಹೂದ್ಯರನ್ನು ಅವರ ಕಷ್ಟಗಳಿಂದ ಬಿಡಿಸುವುದು, ಸತ್ತಿದ್ದ ನಂಬಿಗಸ್ತರನ್ನು ಎಬ್ಬಿಸುವುದರ ಜತೆಗೆ ಈಗ ಜೀವದಿಂದಿರುವವರನ್ನು ಸಾವಿರ ವರ್ಷಗಳ ಆಳ್ವಿಕೆಗಾಗಿ ಬದಲಾಯಿಸುವುದು. ನಿಶ್ಯಬ್ಧವಾಗಿ ಭೂಮಿ0ಯ ಅಡಿ0ಯಲ್ಲಿ ಹೂಳಲ್ಪಟ್ಟ ಪ್ರತಿ0ಯೊಬ್ಬ ನಂಬಿಕಸ್ತರನ್ನು ಎಬ್ಬಿಸುವುದು, ಆಗ 0ಯಾರೂ ಮರೆ0ಯಲ್ಪಡುವುದಿಲ್ಲ, ಬಿಡಲ್ಪಡುವುದಿಲ್ಲ. ದುಷ್ಟರು ತಮ್ಮ ಅಕ್ರಮಗಳಿಂದಲೇ ನಾಶವಾಗುವರು.

# ಯೇಸುವಿನ ಬರೋಣದ ಗುರುತುಗಳು :–

ಯೇಸುವು ತನ್ನ ಬರೋಣದ ಕುರಿತು ತನ್ನ ಶಿಷ್ಯರಿಗೆ, ಅದನ್ನು ತಿಳುಕೊಳ್ಳುವುದು ಹೇಗೆಂಬುದನ್ನು ಕುರಿತು ಹೀಗೆ ಹೇಳಿದನು– 0ಯುದ್ಧಗಳಾಗುವುವು, ಜನಾಂಗಗಳೊಳಗೆ ಗಲಭೆ, ಭ0ಯದಿಂದ ಜನರ ಹೃದ0ಯ ಕುಂದಿಹೋಗುವುದು, ಪ್ರಪಂಚಕ್ಕೆ ಏನು ಸಂಭವಿಸುವುದೋ ಎಂಬ ಭ0ಯ, ಪಾಪವು ಹೆಚ್ಚುವುದರಿಂದ ಮನುಷ್ಯರ ಹೃದ0ಯವು ತಣ್ಣಗಾಗುವುದು. ಕ್ರಿಸ್ತನು ಆಗಮಿಸುವಾಗ ವಿಶ್ವಾಸಿಗಳು ಬಹಳ ಕಡಿಮೆ ಇರುವರು.

ಕ್ರಿಸ್ತನ ಆಗಮನಕ್ಕೆ ಮುಂಚಿತವಾಗಿಯೇ ಕ್ರಿಸ್ತನಿಗೆ ವಿರೋಧವಾದವರೆಲ್ಲರೂ ಭೂಮಿ0ಯಲ್ಲಿ ಅಧಿಕಾರದಿಂದ ತೆಗೆದುಹಾಕಲ್ಪಡುವರೆಂದು ನಾನು ಮೊದಲು ನೆನಸಿದ್ದೆನು, ಆದರೆ ಅದು ಶಾಸ್ತ್ರಪ್ರಕಾರವಲ್ಲದ್ದರಿಂದ ಅದನ್ನು ನಂಬದಂತೆ ಈಗ ನನ್ನ ವೇದ ಅರಿವು ಎಚ್ಚರಿಸುತ್ತದೆ. ಕ್ರಿಸ್ತನು ಬಂದಾಗ ಏನೆಲ್ಲಾ ನಡೆ0ಯುತ್ತದೆಂಬುದನ್ನು ಅನೇಕ ಸ್ಥಳಗಳಲ್ಲಿ ತಿಳಿಸಿದೆ. ಆತನು ಬಂದು ತನ್ನ ರಾಜ್ಯವನ್ನು ಸ್ಥಾಪಿಸುವವರೆಗೂ ಇದು ಅಸಾಧ್ಯವೆಂದು ನಂಬುತ್ತೇನೆ. ಭೂಮಿಯ ಸಕಲ ರಾಜ್ಯಗಳು ರಾಜರೂ ಅಳಿದಾಗ ಮಾತ್ರವೇ ಮಾನುಷ ಸರ್ಕಾರಗಳೂ, ಮಾನುಷ ಮತಗಳೂ ಏನೂ ಇಲ್ಲದಾಗುವುದು, ಒಂದೇಒಂದು ಬೇಡಿಕೆ ಮಾತ್ರ ನನಗುಂಟು, ಸತ್ಯವೇದವನ್ನು ಹುಡುಕಿ ಇವು ನಿಜವೋ ಅಲ್ಲವೋ ತಿಳಿಯಿರಿ. ನೀವು ಅವಿಶ್ವಾಸಿಯಾಗಿರುವುದಾದರೆ ಪಶ್ಚಾತ್ತಾಪಪಟ್ಟು ಸುವಾರ್ತೆಯನ್ನು ನಂಬಿರಿ. ನೀವು ವಿಶ್ವಾಸಿಗಳಾಗಿರುವುದಾದರೆ ಪ್ರವಾಸಿಗಳಾಗಿರುವ ನನಗೋಸ್ಕರವೂ, ನಿಮಗೋಸ್ಕರವೂ ಆತನ ಮಹಿಮೆಗೆ ಕಾದಿರುವವರೆಲ್ಲರಿಗಾಗಿಯೂ ಪ್ರಾರ್ಥಿಸಿರಿ. ಹಾಗಾದರೆ, ಯೇಸುವೇ ನಮಗೆ ಬೆಳಕಾಗಿಯೂ ಮಹಿಮೆಯಾಗಿಯೂ ಎಂದಿಂದಿಗೂ ಸಂತೋಷವಾಗಿಯೂ ಇರುವ ಆ ಹೊಸ ಯೆರುಸಲೇಮಿನಲ್ಲಿ ಕೃಪೆಯ ಮೂಲಕ ಸಂಧಿಸೋಣ ಆಮೆನ್, ಆಮೆನ್.